ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 230 RNI Number : KNKAN/25/A2770 31-08-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :230 ರಾಯಚೂರು 31-08-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ಅಧಿಕಾರಿಗಳಿಂದ ಹೋಕ್ರಾಣಿ ಗ್ರಾಮದಲ್ಲಿ ಶಾಂತಿ ಸಭೆ

ಕಾನೂನಿನಲ್ಲಿ ಎಲ್ಲಾರೂ ಸಮಾನರು ,ತಾರತಮ್ಯ ಬೇಡ - ಅಶೋಕಪವಾರ





ಸಿರವಾರ,ಆ.30-

ಇಂದಿನ ಆಧುನಿಕ ಯುಗದಲ್ಲಿ ಸಹ ಅಶ್ಪಸ್ಯತೆ ಇನ್ನೂ ಜೀವಂತವಾಗಿರುವುದು ಶೋಚನೀಯ ಸಂಗತಿ. ಸಮಾ ಸಮಾಜ ನಿರ್ಮಾಣಕ್ಕೆ ಎಲ್ಲರು ಕೈಜೋಡಿಸಬೇಕು. ಸಮಾನತೆ ಕಾಪಾಡುವದರಿಂದ ಅಶ್ಪಸ್ಯತೆ ನಿರ್ಮೂಲನೆ ಮಾಡಬೇಕು. ಜಾತಿ ಪದ್ದತಿ ತಡೆಯಬೇಕು. ಗ್ರಾಮದಲ್ಲಿ ಶಾಂತಿ, ಸಮಾರಸ್ಯ ಕಾಪಡಬೇಕು. ಎಲ್ಲಾರು ಸಹಬಾಳ್ವೆಯಿಂದ ಜೀವನ ನಡೆಸಬೇಕೆಂದರು. ಒಬ್ಬರು ಮತ್ತೊಬ್ಬರ ಹಕ್ಕು, ಕರ್ತವ್ಯಗಳನ್ನು ಕಸಿದು ಕೊಳುವ ಸ್ವಾತಂತ್ಯ ಇಲಾ, ಎಲ್ಲಾ ಜಾತಿ, ಧರ್ಮ, ವರ್ಣದವರು ಒಂದಾಗಿ ಇರಬೇಕು ಎಂದು ತಹಸೀಲ್ದಾರ ಅಶೋಕಪವಾರ ಗ್ರಾಮಸ್ಥರಿಗೆ ಹೇಳಿದರು. ತಾಲೂಕಿನ ಹೊಕ್ರಾಣಿ ಗ್ರಾಮದಲ್ಲಿ ಶನಿವಾರ ನಡೆದ ತಾಲೂಕ ಮಟ್ಟದ ಅಧಿಕಾರಿಗಳ ಶಾಂತಿ ಪಾಲನೆ ಸಭೆಯ ಅದ್ಯಕ್ಷತೆ ವಹಿಸಿ ಮಾತನಾಡಿದ ಅವರು ದೇಶಕ್ಕೆ ಸ್ವಾತಂತ್ರ್ಯ ಬಂದು 80 ವರ್ಷವಾದರೂ ಜಾತಿ, ಧರ್ಮ ತಾರತಮ್ಯ ಹೋಗಿಲ ಎಂದರೆ ಏನು ಅರ್ಥ, ವಿದ್ಯಾವಂತರ ಇಂತಹ ವಿಚಾರಗಳನ್ನು ಹಿರಿಯರಿಗೆ ತಿಳಿ ಹೇಳಬೇಕು. ಎಲ್ಲಾರ ದೇಹದಲ್ಲಿ ಹರಿಯುವರಕ್ತ, ಕುಡಿಯುವ ನೀರು, ಸೇವಿಸುವ ಗಾಳಿ, ಆಹಾರ ಒಂದೇ ಆಗಿರುವಾಗ ತಾರತಮ್ಯ ಮಾಡುವುದು ಏಷ್ಟು ಸರಿ. ಸಂವಿಧಾನದಲ್ಲಿ ಪ್ರತಿಯೊಬ್ಬರಿಗು ಹಕ್ಕು ಕರ್ತವ್ಯಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಶೋಷಿತ ಸಮಾಜ ದವರ ಮೆಲೆ ಮೇಲ್ವರ್ಗದವರು

3 ನೇ ಪುಟಕ್ಕೆ

ನುಲಿಯ ಚಂದಯ್ಯ ಜಯಂತಿ ಭಾವಚಿತ್ರ ಮೆರವಣಿ

ಭಜಂತ್ರಿ ಸಮಾಜದವರು ಶಿಕ್ಷಣ ಪಡೆಯಬೇಕು - ಅರಳಪ್ಪ ಯದ್ದಲದಿನ್ನಿ



ಸಿರವಾರ,ಆ.30-

ಪರಿಶಿಷ್ಟ ಜಾತಿಯಲ್ಲಿ ಅತ್ಯಂತ ತಳ ಸಮುದಾಯ ನಿಮ್ಮದಾಗಿದ್ದೂ, ಶಿಕ್ಷಣ ಪಡೆದಾಗ ಎಲ್ಲಾ ಸ್ಥಾನಮಾನ ಸಿಗುತ್ತದೆ, ಕೂಲಿ ಕೆಲಸಕ್ಕೆ ಕಳಿಸದೆ ಶಾಲೆಗೆ ಕಳಿಸಬೇಕು ಎಂದು ದಲಿತ ಮುಖಂಡ ಅರಳಪ್ಪ ಯದ್ದಲದಿನ್ನಿ ಹೆಳಿದರು. ಪಟ್ಟಣದಲ್ಲಿ ನುಲಿಯ ಚಂದಯ್ಯ ಜಯಂತಿ ಅಂಗವಾಗಿ ಬಸವ ವೃತ್ತದಿಂದ ಪಿಡಬ್ಲ್ಯೂಡಿ ಕ್ಯಾಂಪಿನ ಅಂಜನೇಯ ದೇವಸ್ಥಾನ-ದವರೆಗೆ ಮಹಿಳೆಯರ ಕುಂಭ, ಕಳಸ, ಬಾಜಾ-ಭಜಂತ್ರಿಯೊಂದಿಗೆ ಸಡಗರ ಸಂಭ್ರಮದಿಂದ ಭಾವಚಿತ್ರ ಮೆರವಣಿಗೆ ನಡೆಯಿತು.

ನಂತರ ನೂಲಿಯ ಚಂದಯ್ಯ ನಾಮಫಲಕಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದ ಸಮಾಜದ ರಾಜ್ಯ ಘಟಕದ ಸದಸ್ಯ ಬಸವರಾಜ ಭಜಂತ್ರಿ ಮಾನ್ವಿ, 'ಸಮಾಜದ ಪ್ರತಿಯೊಬ್ಬರೂ ಶಿಕ್ಷಣ, ಆರ್ಥಿಕತೆ ಸೇರಿ ಎಲ್ಲ ರಂಗದಲ್ಲೂ ಸಬಲರಾಗಬೇಕು. ನುಲಿನ ಶರಣ ಚಂದಯ್ಯನವರಂತೆ ನಮ್ಮ

3 ನೇ ಪುಟಕ್ಕೆ

ಸ್ವಯಂ ಉದ್ಯಮಗಳಿಂದ ಮಹಿಳೆಯರ ಉಜ್ವಲ ಭವಿಷಕ್ಕೆ ದಾರಿ: ಜಿ.ಯು.ಹ್ಮಡೆದ

ರಾಯಚೂರು ಆ.29-

ಸಣ್ಣ ಪ್ರಮಾಣದ ಉದ್ಯಮಗಳನ್ನು ಪ್ರಾರಂಭಮಾಡಿ ಅವುಗಳನ್ನು ಸರಿಯಾಗಿ ನಡೆಸಿಕೊಂಡು ಹೋಗಿ ಮುಂದೆ ದೊಡ್ಡ ದೊಡ್ಡ ಉದ್ಯಮಗಳನ್ನಾಗಿ ಮಾಡಲು ಮುಖ್ಯವಾಗಿ ಉದ್ಯಮಶೀಲರು ಮನಸ್ಸು ಮಾಡಬೇಕು ಎಂದು ರಾಯಚೂರಿನ ಸಿಡಾಕ್ ಸಲಹೆಗಾರರು ಜಿ ಯು ಹ್ಮಡೆದ ಅವರು ಹೇಳಿದರು. ಇತ್ತೀಚೆಗೆ ರಾಯಚೂರು ಜಿಲ್ಲೆಯ ಸಿಂಧನೂರಿನ ವಿಆರ್ ಎಲ್‌ಸಿ ಪಿಡಬ್ಲುಡಿ ಕ್ಯಾಂಪ್‌ನಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ರಾಯಚೂರು ಇವರ



ಸಂಯುಕ್ತಾಶ್ರಯದಲ್ಲಿ ಭಾವಿ ಉದ್ಯಮಶೀಲರುಗಳಿಗೆ ಹಮ್ಮಿಕೊಂಡಿದ್ದ ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಸ್ವಯಂ ಉದ್ಯಮಗಳ ಬಗ್ಗೆ ಮಾಹಿತಿ, ಉದ್ಯಮಶೀಲತೆ, ಯಶಸ್ವಿ ಉದ್ಯಮಶೀಲರ ಗುಣಲಕ್ಷಣಗಳು, ನಾಯಕತ್ವದ ಗುಣಲಕ್ಷಣಗಳು, ಉದ್ಯಮವನ್ನು ಆಯ್ಕೆ ಮಾಡುವ ವಿಧಾನ, ವ್ಯಾಪಾರೋದ್ಯಮಗಳ ಅವಕಾಶಗಳು, ಉದ್ಯಮಗಳನ್ನು ಪ್ರಾರಂಭಿಸುವ ಹಂತಗಳು, ಸ್ವಯಂ ಉದ್ಯೋಗಕ್ಕೆ ಇರುವ ಸರ್ಕಾರದ ಯೋಜನೆಗಳು, ಬ್ಯಾಂಕ್ ವ್ಯವಹಾರ ಮಾಡುವ ಬಗ್ಗೆ, ಸಾಲ ಮತ್ತು ಹಣಕಾಸು ಮತ್ತು ಹಣಕಾಸೇತರ

3 ನೇ ಪುಟಕ್ಕೆ

ಗುಂಜಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಡಿಹೆಚ್‌ಒ ಡಾ. ನಂದಿತಾ ಭೇಟಿ

ರಾಯಚೂರು,ಆ.30-

ರಾಯಚೂರು ತಾಲೂಕಿನ ಗುಂಜಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಂದಿತಾ ಎಂ.ಎನ್. ಅವರು ಶನಿವಾರ ಭೇಟಿ ನೀಡಿ ಆಸ್ಪತ್ರೆಯ ವಿವಿಧ ವಿಭಾಗಗಳನ್ನು ಪರಿಶೀಲಿಸಿದರು.



ಆಸ್ಪತ್ರೆಯ ಹೆರಿಗೆ ವಾರ್ಡ್‌ಗೆ ಭೇಟಿ ನೀಡಿದ ಅವರು ಬಾಣಂತಿಯರ ಆರೋಗ್ಯ ವಿಚಾರಿಸಿದರು. ನವಜಾತ ಶಿಶುಗಳನ್ನು ಬೆಚ್ಚಗಿಡುವುದು, ಆರು ತಿಂಗಳವರೆಗೆ ತಾಯಿಯ ಎದೆಹಾಲನ್ನೇ ನೀಡುವುದು ಹಾಗೂ ಬಾಣಂತಿಯರಿಗೆ ಪೌಷ್ಟಿಕ ಆಹಾರ ಒದಗಿಸುವಂತೆ ಸಲಹೆ ನೀಡಿದರು. ಶಿಶುಗಳಿಗೆ ನಿಗದಿತ ಸಮಯದಲ್ಲಿ ಲಸಿಕೆ ಹಾಕಿಸುವಂತೆ ತಾಯಂದಿರಿಗೆ ತಿಳಿಸಿದರು.

ನಂತರ ಔಷಧ ಕೊಠಡಿ ಹಾಗೂ ಪ್ರಯೋಗಾಲಯವನ್ನು ಪರಿಶೀಲಿಸಿದ ಡಾ. ನಂದಿತಾ, ಆಸ್ಪತ್ರೆಗೆ ಆಗಮಿಸುವ ಸಾರ್ವಜನಿಕರಿಗೆ ಸರ್ಕಾರದ ವತಿಯಿಂದ ದೊರೆಯುವ ವೈದ್ಯಕೀಯ ಸೇವೆಗಳನ್ನು ಯಾವುದೇ ಕೊರತೆಯಿಲ್ಲದೆ ಒದಗಿಸಬೇಕು. ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ

3 ನೇ ಪುಟಕ್ಕೆ

ಬುದ್ಧ ಪ್ರಜ್ಞಾ ಮಕ್ಕಳ ಮೈತ್ರಿ ಹಬ್ಬ ಪೋಸ್ಟರ್ ಬಿಡುಗಡೆ

ಮಕ್ಕಳಗಳಲ್ಲಿ ಬುದ್ಧರ ಪ್ರಜ್ಞಾ ಬೆಳೆಸಬೇಕು - ಡಾ.ಷಣ್ಮುಖ



ಸಿರವಾರ,ಆ.30-

ಭಾರತೀಯರ ಮೂಲ ಧರ್ಮ ಬೌಧ ಧರ್ಮವಾಗಿದೆ, ಪ್ರಧಾನ ಮಂತ್ರಿಯವರೆ ನಾನು ಬುದ್ದನ ನಾಡಿನಿಂದ ಬಂದಿದ್ದೆನೆ ಎಂದು ಅನೇಕ ಬಾರಿ ಹೇಳಿದ್ದಾರೆ. ಇಂತಹ ಬುದ್ಧ ಪ್ರಜ್ಞೆಯನ್ನು ಮಕ್ಕಳಿಗೆ ಚಿಕ್ಕ ವಯಸ್ಸಿ ನಲ್ಲಿ ಬಿತ್ತುವುದಕ್ಕೆ ಜಿಲ್ಲೆಯ ಮಕ್ಕಳಿಗೆ ರಸಪ್ರಶ್ನೆ ಕಾರ್ಯಕ್ರಮ ನೃತ್ಯ, ಕವನ, ಭಾಷಣ ಮುಂತಾದ 32ವಿಭಾಗದ ಸ್ಪರ್ಧೆಗಳನ್ನು ಸೆಪ್ಟೆಂಬರ್ 12,13 ಎರಡು ದಿನ ರಾಯಚೂರು ಸಿದ್ದರಾಮ ಜಂಬಲದಿನ್ನಿ ರಂಗ ಮಂದಿರದಲ್ಲಿ ನಡೆಯುವ ಬುದ್ಧ ಪ್ರಜ್ಞಾ ಮಕ್ಕಳ ಮೈತ್ರಿ ಹಬ್ಬವನ್ನು ಆಚರಣೆ ಮಾಡಲಾಗುತ್ತಿದ್ದೂ, ಯಾವುದೇ ಜಾತಿ ಬೇದವಿಲ್ಲದೆ ತಮ್ಮ ಮಕ್ಕಳನ್ನು ಭಾಗವಹಿಸಿ ಎಂದು ಪಶು ವೈದ್ಯ ಅಧಿಕಾರಿ ಷಣ್ಮುಖ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುದ್ಧ ಪ್ರಜ್ಞಾ ಮಕ್ಕಳ ಮೈತ್ರಿ ಹಬ್ಬವನ್ನು ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ

3 ನೇ ಪುಟಕ್ಕೆ

ಕೇಂದ್ರ ಬಸ್ ನಿಲ್ದಾಣದಲ್ಲಿರುವ ಸಾರ್ವಜನಿಕ ಶೌಚಾಲಯದ ನಿರ್ವಹಣೆಯಲ್ಲಿ ಅಕ್ರಮ ಹಾಗೂ ಅವ್ಯವಸ್ಥೆ

ರಾಯಚೂರು, ಆ.30:



ರಾಯಚೂರು ಕೇಂದ್ರ ಬಸ್ ನಿಲ್ದಾಣದಲ್ಲಿರುವ ಸಾರ್ವಜನಿಕ ಶೌಚಾಲಯದ ನಿರ್ವಹಣೆಯಲ್ಲಿ ಅಕ್ರಮ ಹಾಗೂ ಅವ್ಯವಸ್ಥೆ ನಡೆಯುತ್ತಿದೆ ಎಂದು ಆರೋಪಿಸಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ () ವ್ಯವಸ್ಥಾಪಕ ನಿರ್ದೇಶಕರಿಗೆ ದೂರು ಸಲ್ಲಿಸಲಾಗಿದೆ.

ಶೌಚಾಲಯ ಬಳಕೆಗೆ ₹3 ಹಾಗೂ ಮೂತ್ರಾಲಯ ಬಳಕೆ ಉಚಿತ ಎಂದು ಫಲಕ ಅಳವಡಿಸಿದ್ದರೂ, ಪ್ರಯಾಣಿಕರಿಂದ ತಲಾ ₹10 ವಸೂಲಿ ಮಾಡಲಾಗುತ್ತಿದೆ. ಮೂತ್ರಾಲಯ ಉಚಿತವಾಗಿದ್ದರೂ ಮಹಿಳೆಯರಿಂದಲೂ ₹10 ಪಡೆಯಲಾಗುತ್ತಿದೆ ಎಂದು ಅಖಂಡ ಕರ್ನಾಟಕ ರಕ್ಷಣಾ ಸೇವಾ ದಳದ ರಾಯಚೂರು ಜಿಲ್ಲಾಧ್ಯಕ್ಷ ಆ.ಮ. ನಡುಮನಿ ದೂರಿನಲ್ಲಿ ತಿಳಿಸಿದ್ದಾರೆ.

ಜುಲೈ 10ರಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರು ರಾಯಚೂರು ಬಸ್ ನಿಲ್ದಾಣಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಕುರಿತು ದೂರು ನೀಡಲಾಗಿತ್ತು. ಸ್ಥಳದಲ್ಲಿದ್ದ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀ ಇಮಾಮ್ ಖಾಸಿಮ್ ಕಂದಗಲ್ ಅವರಿಗೆ ಸಮಸ್ಯೆ ಬಗೆಹರಿಸುವಂತೆ ಅಧ್ಯಕ್ಷರು ಸೂಚಿಸಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.



ಆದರೆ, ಸೂಚನೆ ನೀಡಿದ ಬಳಿಕವೂ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಪ್ರಸ್ತುತವೂ ಪ್ರಯಾಣಿಕರಿಂದ ಹೆಚ್ಚಿನ ಹಣ ವಸೂಲಿ ಮಾಡಲಾಗುತ್ತಿದೆ ಹಾಗೂ ಮಹಿಳಾ ಶೌಚಾಲಯದ ನಿರ್ವಹಣೆಯ ಸ್ಥಳದಲ್ಲಿ ಪುರುಷ ಸಿಬ್ಬಂದಿಯೇ ಕುಳಿತುಕೊಳ್ಳುತ್ತಿದ್ದಾರೆ ಎಂದು ಆರೋಪಿಸಲಾಗಿದೆ.

ಮಹಿಳಾ ಶೌಚಾಲಯದೊಳಗೆ ಸ್ವಚ್ಛತೆ ನೆಪದಲ್ಲಿ ಪುರುಷ ಸಿಬ್ಬಂದಿ ಪ್ರವೇಶಿಸುವುದರಿಂದ ಮಹಿಳಾ ಪ್ರಯಾಣಿಕರಿಗೆ ಮುಜುಗರ ಉಂಟಾಗುತ್ತಿದೆ

3 ನೇ ಪುಟಕ್ಕೆ

ರಾಷ್ಟ್ರೀಯ ಕ್ರೀಡಾ ದಿನಾಚರಣೆ; ವಿದ್ಯಾರ್ಥಿನಿಯರು ಮೇಜರ್ ಧ್ಯಾನಚಂದ್‌ರ ಪರಿಶ್ರಮ, ಶಿಸ್ತು, ದೇಶಭಕ್ತಿಯನ್ನು ಅಳವಡಿಸಿಕೊಳ್ಳಿ- ಬಾಲಪ್ಪ ಭಾವಿಮನಿ

ನವಸ್ಫೂರ್ತಿ ಸುದ್ದಿ

ದೇವದುರ್ಗ ,ಆ.30-

ಭಾರತಕ್ಕೆ ಹಾಕಿಯಲ್ಲಿ ಮೂರು ಒಲಿಂಪಿಕ್ ಚಿನ್ನದ ಪದಕಗಳನ್ನು ತಂದುಕೊಟ್ಟ ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್ ಅವರ ಜನ್ಮದಿನ. ಅವರ ಕೈಯಲ್ಲಿ ಹಾಕಿ ಸ್ಟಿಕ್ ಇರಲಿಲ್ಲ, ಮಾಯಾ ದಂಡ ವಿತ್ತು. ಚೆಂಡು ಅವರ ಸ್ಟಿಕ್‌ಗೆ ಅಂಟಿ ಕೊಂಡಂತೆ ಇರುತ್ತಿತ್ತು. ಎದುರಾಳಿ ತಂಡದವರು ಅವರ ಸ್ಟಿಕ್ ಅನ್ನು ಮುರಿದು ನೋಡಿದ ಇತಿಹಾಸವೂ ಇದೆ. ಅಂತಹ ಮಹಾನ್ ವ್ಯಕ್ತಿಯ ಪರಿಶ್ರಮ, ಶಿಸ್ತು, ದೇಶಭಕ್ತಿಯನ್ನು ವಿದ್ಯಾರ್ಥಿನಿಯರು ಅಳವಡಿಸಿಕೊಳ್ಳ ಬೇಕು ಎಂದು ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ಬಾಲಪ್ಪ ಭಾವಿಮನಿ ತಿಳಿಸಿದರು.



ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಹಾಗೂ ಕ್ಲಸ್ಟರ್ ಮಟ್ಟದ ಕ್ರೀಡಾ ಕೂಟದಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ವಿತರಣಾ ಸಮಾರಂಭದಲ್ಲಿ ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು.

ಮೇಜರ್ ಧ್ಯಾನಚಂದ್ ಅವರ ಜನ್ಮದಿನವಾದ ಆಗಸ್ಟ್ 29 ರಂದು ನಾವು ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸುತ್ತೇವೆ. ಇದು ಕೇವಲ ಒಂದು ದಿನವಲ್ಲ, ಇದು ಕ್ರೀಡಾ ಚೈತನ್ಯದ ಸಂಕೇತವಾಗಿದೆ. ಅವರ ತಂದೆಯೇ ಅವರಿಗೆ ಮಾರ್ಗ ದರ್ಶಕರಾಗಿದ್ದರು. ಅವರ ಹಾದಿ ನಯಲ್ಲಿ ಸಾಗೋಣ ಎಂದು

3 ನೇ ಪುಟಕ್ಕೆ

ನಶಾಮುಕ್ತ ಯುವಜನತೆಯಿಂದಲೇ ವಿಕಸಿತ ಭಾರತ ಸಾಧ್ಯ : ಮೋದಿ ಮನ್ ಕಿ ಬಾತ್

ನವದೆಹಲಿ, ಆ.30-

ದೇಶವು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಪ್ರಗತಿ ಸಾಧಿಸಿ ವಿಕಸಿತ ಭಾರತವಾಗಿ ರೂಪುಗೊಳ್ಳಬೇಕಾದರೆ ಯುವಜನತೆ ಮಾದಕ ವಸ್ತುಗಳ ಪಿಡುಗಿನಿಂದ ಸಂಪೂರ್ಣವಾಗಿ ಮುಕ್ತರಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ತಮ್ಮ ಮಾಸಿಕ ರೇಡಿಯೊ ಕಾರ್ಯಕ್ರಮ ಮನ್ ಕಿ ಬಾತ್‌ನ 137ನೇ ಸಂಚಿಕೆಯಲ್ಲಿ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಅವರು, ದೇಶದ ಭವಿಷ್ಯವನ್ನು ಸುರಕ್ಷಿತವಾಗಿರಿಸುವುದು ಸರ್ಕಾರದ ಪ್ರಮುಖ ಸಂಕಲ್ಪಗಳಲ್ಲಿ ಒಂದಾಗಿದೆ ಎಂದು ಹೇಳಿದರು.

ವಿಕಸಿತ ಭಾರತಕ್ಕಾಗಿ ಸರ್ಕಾರ ನಡೆಸುತ್ತಿರುವ ನಶಾ ಮುಕ್ತ ಯುವ ಅಭಿಯಾನವನ್ನು ಶ್ಲಾಘಿಸಿದ ಮೋದಿ, ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಈ ಜಾಗೃತಿ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಾದಕ ವ್ಯಸನವು ವ್ಯಕ್ತಿಯ ಆರೋಗ್ಯವನ್ನು ಮಾತ್ರವಲ್ಲದೆ



ಇಡೀ ಕುಟುಂಬ ಹಾಗೂ ಸಮಾಜವನ್ನೇ ನಾಶಪಡಿಸುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ವಿವಿಧ ಭಾಷೆಗಳಲ್ಲಿ ಮಾದಕ ವ್ಯಸನದ ವಿರುದ್ಧ ಜಾಗೃತಿ ಮೂಡಿಸುವ ಸಂದೇಶಗಳನ್ನು ಹರಡಲು ವಿಷಯ ರಚನೆಕಾರರಿಗೆ (ಕಂಟೆಂಟ್ ಕ್ರಿಯೇಟರ್) ಪ್ರಧಾನಿ ವಿಶೇಷ ಕರೆ ನೀಡಿದರು. ಯುವಜನರಿಗೆ ಮಾದಕ ವಸ್ತುಗಳ ಅಪಾಯದ ಕುರಿತು ಅರಿವು ಮೂಡಿಸುವಲ್ಲಿ ಸಾಮಾಜಿಕ ಮಾಧ್ಯಮದ ವಿಷಯ ರಚನೆಕಾರರು, ಶಿಕ್ಷಕರು, ಪೋಷಕರು, ಕಲಾವಿದರು ಹಾಗೂ ಸ್ವಯಂಸೇವಾ ಸಂಘಟನೆಗಳು ಪ್ರಮುಖ ಪಾತ್ರ ವಹಿಸಬೇಕು ಎಂದರು.

ಹಾಡುಗಳು, ಘೋಷಣೆಗಳು, ಕಿರುಚಿತ್ರಗಳು ಹಾಗೂ ಬೀದಿ ನಾಟಕಗಳ ಮೂಲಕ ವಿವಿಧ ಭಾರತೀಯ ಭಾಷೆಗಳಲ್ಲಿ ಮಾದಕ ವ್ಯಸನದ ವಿರುದ್ಧ ಜಾಗೃತಿ ಸಂದೇಶವನ್ನು ಜನರಿಗೆ ತಲುಪಿಸುವ ಅಗತ್ಯವಿದೆ ಎಂದು ಅವರು ಹೇಳಿದರು. ವ್ಯಸನದ ವಿರುದ್ಧ ಹೋರಾಡುತ್ತಿರುವವರು ಹಾಗೂ ವ್ಯಸನದಿಂದ ಹೊರಬರಲು ಪ್ರಯತ್ನಿಸುತ್ತಿರುವವರಿಗೆ ನೆರವಾಗುವವರನ್ನು ಮೋದಿ ಶ್ಲಾಘಿಸಿದರು.

ಆಗಸ್ಟ್ ತಿಂಗಳ ದೇಶಭಕ್ತಿ

ಆಗಸ್ಟ್ ತಿಂಗಳು ಭಾರತೀಯರಲ್ಲಿ ವಿಶೇಷ ದೇಶಭಕ್ತಿಯ ಭಾವನೆಯನ್ನು ಮೂಡಿಸುತ್ತದೆ ಎಂದು ಹೇಳಿದ ಪ್ರಧಾನಿ ಮೋದಿ, ರಾಷ್ಟ್ರೀಯ ಕೈಮಗ್ಗ ದಿನ, ಸ್ವಾತಂತ್ರ್ಯ ದಿನ, ರಾಷ್ಟ್ರೀಯ ಬಾಹ್ಯಾಕಾಶ ದಿನ, ಕ್ವಿಟ್ ಇಂಡಿಯಾ ಚಳವಳಿ ಹಾಗೂ ವಿಭಜನೆಯ ಭೀಕರ ಸ್ಮರಣಾ ದಿನದ ಮಹತ್ವವನ್ನು ವಿವರಿಸಿದರು.

ಈ ವರ್ಷ ವಂದೇ ಮಾತರಂ ಗೀತೆಯ 150ನೇ ವಾರ್ಷಿಕೋತ್ಸವ ಆಚರಿಸಲಾಗುತ್ತಿರುವುದು ಸ್ವಾತಂತ್ರ್ಯೋತ್ಸವದ ವಿಶೇಷತೆಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದರು. ಹರ್ ಘರ್ ತಿರಂಗಾ ಅಭಿಯಾನದ ಜತೆಗೆ ಸೂರ್ಯಪಥ ತಿರಂಗ ಉಪಕ್ರಮದ ಮೂಲಕ ಭಾರತದ ತ್ರಿವರ್ಣ ಧ್ವಜವು ಜಾಗತಿಕ ಮಟ್ಟದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ ಎಂದು ಹೆಮ್ಮೆಯಿಂದ ಹೇಳಿದರು.

35 ಲಕ್ಷಕ್ಕೂ ಅಧಿಕ ಮಹಿಳೆಯರಿಗೆ ಸ್ವಾನಿಧಿ ಯೋಜನೆ ಪ್ರಯೋಜನ

ಪ್ರಧಾನಮಂತ್ರಿ ಸ್ವಾನಿಧಿ ಯೋಜನೆಯಡಿ ದೇಶಾದ್ಯಂತ ಇದುವರೆಗೆ 35 ಲಕ್ಷಕ್ಕೂ ಅಧಿಕ ಮಹಿಳೆಯರು ಪ್ರಯೋಜನ ಪಡೆದು ತಮ್ಮ ಸ್ವಂತ ವ್ಯವಹಾರವನ್ನು ವಿಸ್ತರಿಸಿಕೊಂಡಿದ್ದಾರೆ ಎಂದು ಮೋದಿ ತಿಳಿಸಿದರು. ಮಹಿಳೆಯರ ಆರ್ಥಿಕ ಪ್ರಗತಿಯು ಇಡೀ ಕುಟುಂಬದ ಉನ್ನತಿಗೆ

3 ನೇ ಪುಟಕ್ಕೆ

ಆಡಳಿತದಲ್ಲಿ ಪಾರದರ್ಶಕತೆ , ಉತ್ತರದಾಯಿತ್ವ ಕಾಯ್ದುಕೊಳ್ಳಿ-ಬಿ.ವೆಂಕಟಸಿಂಗ್

ಯಾದಗಿರಿ,ಆ.29-

ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ, ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವ ಕಾಯ್ದುಕೊಳ್ಳಲು ಮಾಹಿತಿ ಹಕ್ಕು ಕಾಯ್ದೆಯು ಅತ್ಯಂತ ಪ್ರಮುಖವಾಗಿದೆ ಎಂದು ಕರ್ನಾಟಕ ರಾಜ್ಯ ಮಾಹಿತಿ ಆಯೋಗ, ಕಲ್ಬುರ್ಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ. ವೆಂಕಟಸಿಂಗ್ ಅವರು ಹೇಳಿದರು. ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಇಂದು ಮಾಹಿತಿ ಹಕ್ಕು ಕಾಯ್ದೆ ಕುರಿತು ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಗೆ ಏರ್ಪಡಿ ಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮಾಹಿತಿ ಹಕ್ಕು ಕಾಯ್ದೆಯು ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆಡಳಿತದ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಕಾಯ್ದುಕೊಳ್ಳಲು ಅತ್ಯಂತ ಪ್ರಮುಖವಾದ ಕಾಯ್ದೆಯಾಗಿದೆ. ಪ್ರಜೆಗಳಿಗೆ ಸರ್ಕಾರದ ಆಡಳಿತದ ಬಗ್ಗೆ ಪ್ರಶ್ನಿಸುವ ಹಾಗೂ ಮಾಹಿತಿ ಪಡೆಯುವ ಅಧಿಕಾರವನ್ನು ಇದು ನೀಡಿದೆ ಎಂದರು.



ವಿಶ್ವದ 112ಕ್ಕೂ ಹೆಚ್ಚು ದೇಶಗಳಲ್ಲಿ ಈ ರೀತಿಯ ಕಾಯ್ದೆಗಳು ಜಾರಿಯಲ್ಲಿದ್ದು ಸುಮಾರು 300 ವರ್ಷಗಳ ಇತಿಹಾಸವಿದೆ. ಭಾರತದಲ್ಲಿ 2005ರಲ್ಲಿ ಈ ಕಾಯ್ದೆ ಅನುಷ್ಠಾನಕ್ಕೆ ಬಂತು. ಅದೇ ವರ್ಷ ಕರ್ನಾಟಕವು ಇದನ್ನು ಜಾರಿಗೆ ತರುವ ಮೂಲಕ ಇಡೀ ದೇಶದಲ್ಲೇ ಪ್ರಥಮ ಬಾರಿಗೆ ಕಾಯ್ದೆ ತಂದ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದರು.

ಈ ಹಿಂದೆ ಕಲ್ಯಾಣ ಕರ್ನಾಟಕ ಭಾಗದ ಅರ್ಜಿಗಳ ವಿಚಾರಣೆ ಬೆಂಗಳೂರು ಪೀಠದಲ್ಲೇ ನಡೆಯುತ್ತಿದ್ದವು. ಆದರೆ 2024ರಲ್ಲಿ ಕಲಬುರಗಿಯಲ್ಲಿ ಮಾಹಿತಿ ಆಯೋಗದ ಪೀಠವನ್ನು ಆರಂಭಿಸಲಾಯಿತು. ಮಾಹಿತಿ ಆಯೋಗದಲ್ಲಿ ಇಡೀ ದೇಶದಲ್ಲೇ, ಮಾಹಿತಿ ಹಕ್ಕು ಪ್ರಕರಣಗಳು ಬಾಕಿಯಲ್ಲಿ

ಕರ್ನಾಟಕ 3ನೇ ಸ್ಥಾನದಲ್ಲಿತ್ತು ,ಆದರೆ ಕಳೆದ ಒಂದೂವರೆ ವರ್ಷದಲ್ಲಿ ನಿರಂತರ ವಿಚಾರಣೆ ನಡೆಸಿ, ಬಾಕಿ ಇದ್ದ ಸುಮಾರು 45,000 ಪ್ರಕರಣಗಳಲ್ಲಿ ಗರಿಷ್ಠ ವಿಲೇವಾರಿ ಮಾಡುವ ಮೂಲಕ ಕರ್ನಾಟಕ ಮಾಹಿತಿ ಆಯೋಗವು ದೇಶದಲ್ಲೇ ಪ್ರಕರಣಗಳ ವಿಲೇವಾರಿಯಲ್ಲಿ 1ನೇ ಸ್ಥಾನಕ್ಕೇರಿದೆ. ಕಲಬುರಗಿ ಪೀಠದಲ್ಲಿ ಬಾಕಿ ಇದ್ದ 6,500ಕ್ಕೂ ಹೆಚ್ಚು ಪ್ರಕರಣಗಳಲ್ಲಿ, ಕೇವಲ 115 ದಿನಗಳ ವಿಚಾರಣೆ ಅವಧಿಯಲ್ಲಿ 2,800ಕ್ಕೂ ಹೆಚ್ಚು ಹಳೆಯ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾಧಿಕಾರಿಗಳು ಹಾಗೂ ಪೋಲಿಸ್ ವರಿಷ್ಠಾಧಿಕಾರಿಗಳು ತಮ್ಮ ಪ್ರತಿ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಆರ್.ಟಿ.ಐ. ಅರ್ಜಿಗಳ ಸ್ವೀಕಾರ, ವಿಲೇವಾರಿ ಹಾಗೂ ಬಾಕಿ ಇರುವಿಕೆ ಕುರಿತು ನಿಯಮಿತವಾಗಿ ಪರಿಶೀಲನೆ ನಡೆಸಬೇಕೆಂದು ಸೂಚಿಸಿದರು. ಸಾರ್ವಜನಿಕ ಮಾಹಿತಿ ಅಧಿಕಾ ರಿಗಳು ನಿಗದಿತ ಸಮಯದಲ್ಲಿ ಸೂಕ್ತ ಮಾಹಿತಿ ನೀಡದಿದ್ದರೆ ಅಥವಾ ನಿರ್ಲಕ್ಷ್ಯ ವಹಿಸಿದರೆ ದಂಡ ವಿಧಿಸುವ ಅಧಿಕಾರ ಆಯೋಗಕ್ಕಿದೆ. ಸಕಾಲಕ್ಕೆ ಮಾಹಿತಿ ನೀಡದೆ ದಂಡನೆಗೆ ಒಳ ಗಾಗುವ ಅಧಿಕಾರಿಗಳ ವಿರುದ್ಧ ಇತ್ತೀಚಿನ ಸರ್ಕಾರದ ನಿರ್ದೇಶನದಂತೆ ಎಚ್.ಆರ್.ಎಂ.ಎಸ್. ವ್ಯವಸ್ಥೆಯ ಮೂಲಕ ನೇರವಾಗಿ ವೇತನದಲ್ಲೇ ದಂಡದ ಮೊತ್ತವನ್ನು ಕಡಿತಗೊಳಿಸುವ ಕ್ರಮ ಮುಂಬರುವ ದಿನಗಳಲ್ಲಿ ಜಾರಿಯಾಗಲಿದೆ. ಆದ್ದರಿಂದ ಅಧಿಕಾರಿಗಳು ಶಿಸ್ತು ಕ್ರಮದಿಂದ ತಪ್ಪಿಸಿಕೊಳ್ಳಲು ಸಕಾಲದಲ್ಲಿ ಮಾಹಿತಿ ನೀಡಬೇಕೆಂದು ತಿಳಿಸಿದರು. ಸಾರ್ವಜನಿಕರಿಗೆ ಮಾಹಿತಿ ಒದಗಿಸುವುದು ಸರ್ಕಾರಿ ನೌಕರರಿಗೆ ಸಿಕ್ಕ ದೊಡ್ಡ ಸೌಭಾಗ್ಯ ಹಾಗೂ ಕರ್ತವ್ಯವಾಗಿದೆ. ಅಧಿಕಾರಿಗಳು ತಮ್ಮ ಅಧಿಕಾರ ಅವಧಿಯಲ್ಲಿ ಸಾರ್ವಜನಿಕರಿಗೆ ಪಾರದರ್ಶಕವಾಗಿ ಸೇವೆ ಸಲ್ಲಿಸಬೇಕು ಎಂದು ಅವರು ಕರೆ ನೀಡಿದರು. ಯಾದಗಿರಿ ಜಿಲ್ಲಾಧಿಕಾರಿ ರಾಹುಲ್ ತುಕಾರಾವ್ ಪಾಂಡ್ವೆ ಅವರು ಮಾತನಾಡಿ, ಆರ್.ಟಿ.ಐ ಅನ್ವಯ ಅರ್ಜಿಗಳು ಮತ್ತು ಮೇಲ್ಮನವಿಗಳನ್ನು ವಿಲೇವಾರಿ ಮಾಡುವಲ್ಲಿ ಎದುರಾಗುವ ಸವಾಲು ಗಳು ಹಾಗೂ ಅಧಿಕಾರಿಗಳ ಜವಾ ಬ್ದಾರಿಯ ಕುರಿತು ಬೆಳಕು ಚೆಲ್ಲಿ, ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಗೆ ಕಾಯ್ದೆಯ ಪ್ರಾವಿಷನ್‌ಗಳು, ತಮ್ಮ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ಸರಿಯಾದ ಅರಿವಿರಬೇಕು. ಇದರಿಂದ ಅನಗತ್ಯವಾಗಿ ಅರ್ಜಿ ಗಳು ಮತ್ತು ಮೇಲ್ಮನವಿಗಳು ಪೆಂಡಿಗ್ ಉಳಿಯುವುದನ್ನು ತಡೆಯಬಹುದು. ಸಾರ್ವಜನಿಕರು ಆರ್‌ಟಿಐ ಅರ್ಜಿ ಸಲ್ಲಿಸಿದ ತಕ್ಷಣವೇ ಅದನ್ನು ನೆಗೆಟಿವ್ (ನಕಾರಾತ್ಮಕ) ಆಗಿ ನೋಡುವ ಮನೋಭಾವ ಬದಲಾಗಬೇಕೆಂದರು. ಈ ಸಂದರ್ಭದಲ್ಲಿ ರಾಜ್ಯ ಮಾಹಿತಿ ಆಯೋಗದ ಬೆಂಗಳೂರು ಪೀಠದ ಆಯುಕ್ತ ಡಾ.ವಾಳ್ವೆಕರ್, ಜಿಲ್ಲಾಧಿಕಾರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್,ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ್ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಸಿಬಿಎಸ್‌ಇ ದಕ್ಷಿಣ ಭಾರತ ಅಂತರ ಶಾಲಾ ಕ್ರೀಡಾಕೂಟದ ಹ್ಯಾಂಡಬಾಲ್ ಸ್ಪರ್ದೆಯಲ್ಲಿ ಬಿಪ್ಸ್ ಶಾಲೆಗೆ ಕಂಚಿನ ಪದಕ.



ಬಾಗಲಕೋಟೆ,ಆ.30-

ಸಿಬಿಎಸ್‌ಇ ದಕ್ಷಿಣ ಭಾರತ ಅಂತರ ಶಾಲಾ ಕ್ರೀಡಾಕೂಟ 2026 ಮಹಾರಾಷ್ಟ್ರದ ಶಿರಡಿಯಲ್ಲಿ ಇತ್ತಿಚಿಗೆ ಜರುಗಿದ ಬಾಲಕರ ಹ್ಯಾಂಡಬಾಲ್ ಸ್ಪರ್ದೆಯಲ್ಲಿ ಅಂತರ ಶಾಲಾ ಕ್ರೀಡಾ ಕೂಟದಲ್ಲಿ ಕಂಚಿನ ಪದಕ ಪಡೆದು ರಾಜ್ಯಕ್ಕೆ ಹಾಗೂ ಜಿಲ್ಲೆಗೆ ಮತ್ತು ಶಾಲೆಗೆ ಕಿರ್ತಿಯನ್ನಯ ತಂದಿದ್ದಾರೆ, ಸ್ಪರ್ದೆಯ ಈ ವಿಭಾಗದಲ್ಲಿ 45 ತಂಡಗಳು ಭಾಗವಹಿಸಿದ್ದು ಅದರಲ್ಲಿ ನಮ್ಮ ಶಾಲೆಯ ತಂಡ ಸೇಮಿ ಪೈನಲ್‌ನಲ್ಲಿ ಮೈಸೂರ ತಂಡದೊಂದಿಗೆ ಸೇಣಸಾಡಿ ತೃತೀಯ ಸ್ಥಾನ ಪಡೆದಿದೆ,

ತಂಡದ ಆಟಗಾರರಾದ ಎಸ್.ಎಸ್.ಸತರಡ್ಡಿ, ಸಂಗಮೇಶ ಶೆಟ್ಟರ, ಅಭಿಷೇಕ ಭರಮಟ್ಟಿ, ಅಭಯ ನಂದವಾಡಗಿ, ಸುಮಂತ ಗುರ್ಜರ, ನಂದನ ಪಾಟೀಲ, ಸೂರ್ಯಕಾಂತ, ಅವನೀಶ ಮಾಲಾಪುರ, ರೋಷನ್ ರಾಠೋಡ್, ನಾಗೇಂದ್ರ ಪಟ್ಟೆದ, ಆದಿತ್ಯ ಬಾರಕೇರ, ಸೂರಜ್ ರಾಠೋಡ, ಪಾರ್ಥ ಕುಲಕರ್ಣಿ ಅಕ್ಷಯ ಕೋಷ್ಠಿ, ಸಾತ್ವಿಕ ಪೋತರಡ್ಡಿ ಅವರುಗಳಿಗೆ ಇಂದು ಬಿ.ವಿ.ವಿ.ಸಂಘದ ಕೇಂದ್ರ ಕಛೇರಿಯ ಆವರಣದಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರು ಸನ್ಮಾನಿಸಿ, ಶುಭಾಶಯ ಕೋರಿ ಅಭಿನಂದನೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ, ರವಿ ಸರದೇಸಾಯಿ, ಪ್ರಾಚಾರ್ಯರಾದ ಮಂಗಳಗೌರಿ ಹೇಗಡೆ, ಶಾಲಾ ವಿಭಾದ ನಿರ್ದೇಶಕರಾದ ಸಿ.ಬಿ.ಸುರೇಶ ಹೇಗಡೆ, ತಂಡದ ತರಬೇತುದಾರರಾದ ಶಾಂತು ಕಟ್ಟಿಮನಿ, ಹೊನ್ನಪ್ಪ ಕುರಕಳ್ಳಿ ಇದ್ದರು.

ರಾಷ್ಟ್ರೀಯ ಕ್ರೀಡಾ ದಿನಾಚರಣೆ ಮೇಜರ್ ಧ್ಯಾನಚಂದ್ ಭಾವಚಿತ್ರಕ್ಕೆ ಪುಷ್ಪ ಸಮರ್ಪಣೆ

ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಡಿಸಿ ಸಂಗಪ್ಪ ಚಾಲನೆ



ಬಾಗಲಕೋಟೆ,ಆ.29-

ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡ ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಚಾಲನೆ ನೀಡಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡ ಜಿಲ್ಲಾ ಮಟ್ಟದ ಕ್ರೀಡಾಕೂಟದ ಧ್ವಜಾರೋಹಣ ನೆರವೇರಿಸಿ, ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿಗಳು ಕ್ರೀಡಾ ದಿನಾಚರಣೆ ಎಂದರೆ ಕೇವಲ ಓಟ, ಪದಕ, ಟ್ರೋಫಿ ಹಾಗೂ ಬಹು ಮಾನಗಳ ದಿನವಲ್ಲ. ಆರೋಗ್ಯಕರ ದೇಹ, ಏಕಾಗ್ರ ಮನಸ್ಸು ಮತ್ತು ದೃಢವಾದ ಮನೋಭಾವ ನಮ್ಮ ಜೀವನದಲ್ಲಿ ಎಷ್ಟು ಮುಖ್ಯ ಎಂಬುದನ್ನು ನೆನಪಿಸುವ ವಿಶೇಷ ದಿನವಾಗಿದೆ ಎಂದರು.

ಕ್ರೀಡೆ ವ್ಯಕ್ತಿತ್ವ ವಿಕಸನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕ್ರೀಡೆಯ ಮೂಲಕ ಶಿಸ್ತು, ತಂಡದ ಸಹಕಾರ, ತಾಳ್ಮೆ, ನಾಯಕತ್ವ, ದೃಢನಿಶ್ಚಯ ಹಾಗೂ ಸೋಲಿನ ನಂತರ ಮತ್ತೆ ಎದ್ದು ನಿಲ್ಲುವ ಧೈರ್ಯವನ್ನು ಬೆಳೆಸಿಕೊಳ್ಳಬಹುದಾಗಿದೆ. ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕು ಎಂದರು.

ಗೆಲುವು ಮಾತ್ರ ಕ್ರೀಡೆಯ ಅಂತಿಮ ಗುರಿಯಲ್ಲ. ಭಾಗವಹಿಸುವಿಕೆ, ಪ್ರಾಮಾಣಿಕ ಪ್ರಯತ್ನ, ಕ್ರೀಡಾ ಮನೋಭಾವ ಹಾಗೂ ಅತ್ಯುತ್ತಮ ಪ್ರದರ್ಶನವೂ ಅಷ್ಟೇ ಮಹತ್ವದ್ದಾಗಿದೆ. ಫಲಿತಾಂಶ ವನ್ನು ಯಾವಾಗಲೂ ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ, ಆದರೆ ನಮ್ಮ ಪ್ರಯತ್ನವನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದು ಎಂಬುದನ್ನು ಕ್ರೀಡೆ ನಮಗೆ ಕಲಿಸುತ್ತದೆ ಎಂದು ಹೇಳಿದರು. ನಿಯಮಿತ ಕ್ರೀಡಾ ಭ್ಯಾಸದಿಂದ ದೈಹಿಕ ಆರೋಗ್ಯ ಸುಧಾರಿಸುವುದರ ಜೊತೆಗೆ ಒತ್ತಡ ಕಡಿಮೆಯಾಗುತ್ತದೆ, ಏಕಾಗ್ರತೆ ಹೆಚ್ಚುತ್ತದೆ ಹಾಗೂ ಆತ್ಮವಿಶ್ವಾಸ ವೃದ್ಧಿಯಾಗುತ್ತದೆ ಎಂದರು. ಪ್ರಾರಂಭದಲ್ಲಿ ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ನಂತರ ಕ್ರೀಡಾ ಧ್ವಜಾರೋಹಣದ ನಂತರ ಕ್ರೀಡಾ ಜ್ಯೋತಿಯನ್ನು ಸ್ವಾಗತಿ ಸಲಾಯಿತು. ಕಾರ್ಯಕ್ರಮದಲ್ಲಿ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ, ದೈಹಿಕ ಶಿಕ್ಷಣಾಧಿಕಾರಿಗಳಾದ ಆರ್.ಆರ್. ಪಾಟೀಲ, ವಾಲಿಕಾರ, ಸೈಕ್ಲಿಂಗ್ ತರಬೇತಿಗಾರ್ತಿ ಅನಿತಾ ನಿಂಬರಗಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೇಯರ್-ಉಪ ಮೇಯರ್ ಚುನಾವಣೆ: ಕಾಂಗ್ರೆಸ್ ಪಕ್ಷದ ಶೈಕ್ ಅಜ್ಮಲ್ ಅಹ್ಮದ್

ಗೋಲಾ ಮಹಾಪೌರರಾಗಿ ಮತ್ತು ಫರ್ಹಾನಾಜ್ ಉಪ ಮಹಾಪೌರರಾಗಿ ಆಯ್ಕೆ

ಕಲಬುರಗಿ,ಆ.29-

ಕಲಬುರಗಿ ಮಹಾನಗರ ಪಾಲಿಕೆಯ 24ನೇ ಅವಧಿಯ ಮೇಯರ್-ಉಪ ಮೇಯರ್ ಚುನಾವಣೆ ಶನಿವಾರ ಇಲ್ಲಿನ ಟೌನ್ ಹಾಲ್‌ನಲ್ಲಿ ಶಾಂತಿಯುತವಾಗಿ ಜರುಗಿದ್ದು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಶೈಕ್ ಅಜ್ಮಲ್ ಅಹ್ಮದ್ ಗೋಲಾ ಮಹಾಪೌರರಾಗಿ ಮತ್ತು ಫರ್ಹಾನಾಜ್ (ಫರ್ಹಾ ಖುಸ್ರೂ ಜಾಗೀರದಾರ) ಉಪ ಮಹಾಪೌರರಾಗಿ ಆಯ್ಕೆಯಾಗಿದ್ದಾರೆ.

ಮೇಯರ್ ಸ್ಥಾನಕ್ಕೆ ನಗರದ ವಾರ್ಡ್ ಸಂಖ್ಯೆ 21ರ ಸದಸ್ಯ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಶೇಕ್ ಅಜಮಲ್ ಅಹ್ಮದ್ ಗೋಲಾ ಮತ್ತು ವಾರ್ಡ್ ಸಂ.38ರ ಸದಸ್ಯ ಬಿ.ಜೆ.ಪಿ. ಪಕ್ಷದ ಗುರುರಾಜ ಹಾಗೂ ವಾರ್ಡ್ ಸಂ.30ರ ಸದಸ್ಯ ಜನತಾದಳ(ಜಾತ್ಯಾತೀತ) ಪಕ್ಷದ ಅಲೀಮುದ್ದಿನ್ ಪಟೇಲ್ ಅವರು ಮೇಯರ್ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು. ನಂತರ ಜರುಗಿದ ಚುನಾವಣೆಯಲ್ಲಿ ಶೇಕ್ ಅಜಮಲ್ ಅಹ್ಮದ್ ಗೋಲಾ ಪರವಾಗಿ 35 ಜನ, ಗುರುರಾಜ ಪರವಾಗಿ 29 ಜನ ಹಾಗೂ ಅಲೀಮುದ್ದಿನ್ ಪಟೇಲ್ ಪರವಾಗಿ 3 ಜನ ಸದಸ್ಯರು ಕೈ ಎತ್ತುವ ಮೂಲಕ ತಮ್ಮ ಮತ ಚಲಾಯಿ ಸಿದರು. ಹೆಚ್ಚಿನ ಮತ ಪಡೆದ ಶೇಕ್ ಅಜಮಲ್ ಅಹ್ಮದ್ ಗೋಲಾ ಅವರನ್ನು ಚುನಾವಣಾಧಿಕಾರಿಗಳು ಜಯಶಾಲಿ ಎಂದು ಘೋಷಿಸಿದರು.

ಅದೇ ರೀತಿ ಉಪ ಮೇಯರ್ ಸ್ಥಾನಕ್ಕೆ ವಾರ್ಡ್ ಸಂ.20ರ ಸದಸ್ಯೆ



ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯೆ ಫರ್ಹಾನಾಜ್ ಖುಸ್ರೋ ಜಾಗಿರದಾರ್ ಮತ್ತು ವಾರ್ಡ್ ಸಂ.29ರ ಸದಸ್ಯೆ ಭಾರತೀಯ ಜನತಾ ಪಕ್ಷದ ಮೇಘನಾ ಕಳಸ್ಕರ್ ನಾಮಪತ್ರ ಸಲ್ಲಿಸಿದರು. ಫರ್ಹಾನಾಜ್ ಖುಸ್ರೋ ಜಾಗಿರದಾರ್ ಪರವಾಗಿ 35 ಮೇಘನಾ ಕಳಸ್ಕರ್ ಪರವಾಗಿ 29 ಜನ ಕೈ ಎತ್ತುವ ಮೂಲ ಮತ ಚಲಾವನೆ ಮಾಡಿದ್ದ ರಿಂದ ಫರ್ಹಾನಾಜ್ ಖುಸ್ರೋ ಜಾಗಿರದಾರ್ ಅವರನ್ನು ಉಪ ಮೇಯರ್ ಹುದ್ದೆಗೆ ಚುನಾಯಿತರಾಗಿದ್ದಾರೆಂದು ಘೋಷಿಸಲಾಯಿತು. ನಂತರ ನೂತನ ಮೇಯರ್ ಶೈಕ್ ಅಜ್ಮಲ್ ಅಹ್ಮದ್ ಗೋಲಾ ಮತ್ತು ಉಪ ಮೇಯರ್ ಫರ್ಹಾನಾಜ್ (ಫರ್ಹಾ ಖುಸ್ರೂ ಜಾಗೀರದಾರ) ಅವರಿಗೆ ಚುನಾವಣಾಧಿಕಾರಿ ಜಹೀರಾ ನಸ್ಸೀಂ ಅವರು ಹೂಗುಚ್ಚ ನೀಡಿ ಶೂಭ ಕೋರಿದರು.

ಇದೇ ಸಂದರ್ಭದಲ್ಲಿ ಜರುಗಿದ ನಾಲ್ಕು ಸ್ಥಾಯಿ ಸಮಿತಿಗೂ ಸದಸ್ಯರ ಆಯ್ಕೆ ನಡೆದಿದ್ದು, ಕರ, ಹಣಕಾಸು ಹಾಗೂ ಮೇಲ್ಮನವಿ ಸ್ಥಾಯಿ ಸಮಿತಿಗೆ ರಾಗಮ್ಮ ಎಸ್. ಇನಾಮದಾರ, ಸೈಯದಾ ನೂರ್ ಫಾತಿಮಾ ಜೈದಿ, ವಿಜಯಕುಮಾರ ದ್ವಾರಕದಾಸ ಸೇವಲಾನಿ, ಹೊನ್ನಮ್ಮ ಬಾಬು, ಶಂಭುಲಿಂಗ ಪಾಟೀಲ, ಹೀನಾ ಬೇಗಂ ಅಬ್ದುಲ ರಹೀಮ ಹಾಗೂ ಪುತಲಿ ಬೇಗಂ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಾರ್ವಜನಿಕ ಆರೋಗ್ಯ, ಶಿಕ್ಷಣ ಹಾಗೂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ ಯಲ್ಲಪ್ಪ ತಂದೆ ಶಿವಶರಣಪ್ಪ ನಾಯಕೊಡಿ, ಪ್ರಕಾಶ ಎಚ್. ಕಪನೂರ, ರೇಣುಕಾ ಪರಶುರಾಮ, ಪರವೀನ ಬೇಗಂ, ಪಾರ್ವತಿ ಗಂಡ ರಾಜು ದೇವದುರ್ಗಾ, ವಿಶಾಲಕುಮಾರ ನವರಂಗ ಹಾಗೂ ವಿಶಾಲ ಎಸ್. ಧರ್ಗಿ ಅವರು ಅವಿರೋಧವಾಗಿ ಚುನಾಯಿತರಾದರು.

ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ 7 ಸ್ಥಾನಕ್ಕೆ ಒಟ್ಟು 8 ಜನ ಸದಸ್ಯರು ನಾಮಪತ್ರ ಸಲ್ಲಿಸಿದರು. ಈ ಪೈಕಿ ಗಂಗಮ್ಮ ಎ. ಬಸವರಾಜ ತಮ್ಮ ನಾಮಪತ್ರ ವಾಪಸ್ ಪಡೆದ ಕಾರಣ ಸೈಯದಾ ಮಸೀರಾ ನಸ್ರೀನ್, ಶೇಖ ಹುಸೇನ್, ರಿಯಾಜ್ ಅಹ್ಮದ್ ಸಿದ್ದಿ ಶಾರಿಫುರ ರೆಹಮಾನ, ಲತಾ ರವೀಂದ್ರಕುಮಾರ, ಸಚಿನ್ ರವಿಕುಮಾರ ಹೊನ್ನಾ, ಅರ್ಚನಾ ಗಂಡ ಬಸವರಾಜ ಪಾಟೀಲ ಬಿರಾಳ ಹಾಗೂ ವೀರಣ್ಣ ಹುನ್ನಳ್ಳಿ ಅವಿರೋ ಧವಾಗಿ ಆಯ್ಕೆಯಾದರು. ಲೆಕ್ಕ ಸ್ಥಾಯಿ ಸಮಿತಿಗೆ ಶಿವಾ ನಂದ ಡಿ. ಪಿಸ್ತಿ, ಅರುಣಾಬಾಯಿ ಅಂಬರಾಯ, ತಹಸೀನ, ಇರ್ಫಾನಾ ಪರವೀನ್, ಮಹಮ್ಮದ ಅಜೀ ಮೊದ್ದಿನ್, ಮೊಹಮ್ಮದ ಅಯಾಜ್ ಖಾನ್ ಹಾಗೂ ಗಂಗಮ್ಮ ಗಂಡ ಬಸವರಾಜ ಅವಿರೋಧವಾಗಿ ಆಯ್ಕೆ ಯಾದರು.

ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸ್ಸೀಂ ಅವರು ಚುನಾವ ಣಾಧಿ ಕಾರಿಯಾಗಿ ಸಂಪೂರ್ಣ ಚುನಾ ವಣಾ ಪ್ರಕ್ರಿಯೆ ನಡೆಸಿಕೊಟ್ಟರು. ಅಪರ ಜಿಲ್ಲಾಧಿಕಾರಿ ಮತ್ತು ಪ್ರಭಾರಿ ಹೆಚ್ಚುವರಿ ಅಪರ ಪ್ರಾದೇಶಿಕ ಆಯುಕ್ತರಾದ ರಾಯಪ್ಪ ಹುಣಸಗಿ, ಮಹಾನಗರ ಪಾಲಿಕೆಯ ಆಯುಕ್ತ ಅವಿನಾಶ ಶಿಂಧೆ, ಉಪ ಆಯುಕ್ತರು (ಅಭಿವೃದ್ಧಿ) ಪ್ರಮೀಳಾ ಎಂ.ಕೆ., ಸಭಾ ಕಾರ್ಯದರ್ಶಿ ಬಿ.ಟಿ. ನಾಯ್ಕ ಇದ್ದರು.

ಮೇಯರ್-ಉಪ ಮೇಯರ್ ಆಯ್ಕೆಯಲ್ಲಿ ಸಂಸದ ರಾಧಾಕೃಷ್ಣ ದೊಡ್ಡಮನಿ, ಶಾಸಕ ರಾದ ಅಲ್ಲಮಪ್ರಭು ಪಾಟೀಲ, ಕನೀಜ್ ಫಾತೀಮಾ, ಬಸವರಾಜ ಮತ್ತಿಮಡು, ವಿಧಾನ ಪರಿಷತ್ ಶಾಸಕರಾದ ಬಿ.ಜಿ.ಪಾಟೀಲ, ಚಂದ್ರ ಶೇಖರ್ ಪಾಟೀಲ, ಶಶೀಲ ಜಿ. ನಮೋಶಿ, ಜಗದೇವ ಗುತ್ತೇದಾರ, ತಿಪ್ಪಣ್ಣಪ್ಪ ಕಮಕನೂರ ಸಹ ಭಾಗಿ ಯಾದ್ದರು.

ನಗರದ ಅಭಿವೃದ್ಧಿಗೆ ಶ್ರಮಿಸುವೆ: ಪಾಲಿಕೆಯ ನೂತನ ಮಹಾಪೌರರಾಗಿ ಆಯ್ಕೆಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶೈಕ್ ಅಜ್ಮಲ್ ಅಹ್ಮದ್ ಗೋಲಾ ಅವರು, ಪ್ರಸ್ತುತ ಬರದ ಛಾಯೆ ಕಾರಣ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಿದ್ದು, ಇದಕ್ಕೆ ತಾವು ಪ್ರಥಮಾದ್ಯತೆ ನೀಡಲಾಗುವುದು. 24 ಗಂಟೆ ನಿರಂತರ ಕುಡಿಯುವ ನೀರಿನ ಯೋಜನೆಗೆ ವೇಗ ಹೆಚ್ಚಿಸಲಾಗುವುದು. ಕಸ ವಿಲೇವಾರಿ ಸಹ ನಮ್ಮ ಮುಂದಿದೆ. ಸರ್ಕಾರಿ ಆಸ್ತಿ ಅತಿಕ್ರಮಣ ಮತ್ತು ಪದಾಚಾರಿ ಮಾರ್ಗ ಅತಿಕ್ರಮಣ ಸಹ ತೆರವುಗೊಳಿಸಲಾಗುವುದು. ಕರ ಸಂಗ್ರಹಣೆ ಮಾಡಿ ಮೂಲಸೌಕರ್ಯಕ್ಕೆ ಹಣ ವಿನಿಯೋಗಿಸಲಾಗುವುದು ಎಂದ ಅವರು, ಎಲ್ಲಾ ಸಮಸ್ಯೆಗಳನ್ನು ಒಮ್ಮೆಲೆ ಬಗೆಹರಿಸಲು ಅಸಾಧ್ಯ. ಸಮಸ್ಯೆಗಳ ಆದ್ಯತಾ ಪಟ್ಟಿ ಮಾಡಿಕೊಂಡು ಹಂತ ಹಂತವಾಗಿ ಬಗೆಹರಿಸುವ ಕೆಲಸ ಮಾಡಲಾಗುವುದು ಎಂದರು.

ನೀರು ಶುದ್ದೀಕರಣ ಘಟಕದ ಅವ್ಯವಸ್ಥೆ :ಅಧಿಕಾರಿಗೆ ಸಿಇಓ ನೋಟಿಸ್

ಬಾಗಲಕೋಟೆ,ಆ.29-

ಬೀಳಗಿ ತಾಲೂಕಿನ ಅನಗವಾಡಿ ಗ್ರಾಮದಲ್ಲಿರುವ ಹೆರಕಲ್ ಬಹುಗ್ರಾಮ ಕುಡಿಯುವ ನೀರು ಯೋಜನೆಯ ನೀರು ಶುದ್ಧೀಕರಣ ಘಟಕಕ್ಕೆ ಶುಕ್ರವಾರ ಭೇಟಿ ನೀಡಿದ ಸಂದರ್ಭದಲ್ಲಿ ನೀರಿನ ತೊಟ್ಟಿಗಳನ್ನು ಸಮರ್ಪಕವಾಗಿ ಸ್ವಚ್ಚಗೊಳಿಸದೆ ಇರುವುದನ್ನು ಕಂಡು ಕುಡಿಯುವ ನೀರಿನ ಶುಚಿತ್ವದಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗೆ ನೋಟಿಸ್ ನೀಡುವಂತೆ ಜಿ.ಪಂ ಸಿಇಓ ಗಜಾನನ ಬಾಲೆ ಸೂಚಿಸಿದರು.

ಬೀಳಗಿ ತಾಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ಕಾಮಗಾರಿ ಪರಿಶೀಲನೆ ಸಂದರ್ಭದಲ್ಲಿ ಸಾರ್ವಜನಿಕರಿಗೆ ಪೂರೈಸುವ ಕುಡಿಯುವ ನೀರಿನ ಶುಚಿತ್ವದಲ್ಲಿ ನಿರ್ಲಕ್ಷ್ಯ ತೋರಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗೆ ನೋಟಿಸ್ ಜಾರಿಮಾಡುವುದರ ಜೊತೆಗೆ 2 ದಿನಗಳೊಳಗಾಗಿ ನೀರು ಶುದ್ದೀಕರಣ ಘಟಕದಲ್ಲಿರುವ ಎಲ್ಲ ತೊಟ್ಟಿಗಳನ್ನು ಸಂಪೂರ್ಣವಾಗಿ ಸ್ವಚ್ಚಗೊಳಿಸಿ, ಕೈಗೊಂಡ ಕ್ರಮದ ವರದಿಯನ್ನು ಸಲ್ಲಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



ಅನಗವಾಡಿಯ ಸಾಮಾಜಿಕ ಅರಣ್ಯ ಇಲಾಖೆಯ ಸಸಿ ಬೆಳೆಸುವ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಸಸಿಗಳ ಬೆಳವಣಿಗೆ ಹಾಗೂ ನಿರ್ವಹಣೆ ಪರಿಶೀಲಿಸಿದರು. ಸ್ಥಳೀಯ ಹವಾಮಾನ ಹಾಗೂ ಸಾರ್ವಜನಿಕರ ಅಗತ್ಯಕ್ಕೆ ಅನುಗುಣವಾಗಿ ವಿವಿಧ ತಳಿಯ ಸಸಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ತುಮ್ಮರಮಟ್ಟಿ ಗ್ರಾಮದಲಿ ವಿಬಿಜಿರಾಮ್‌ಜಿ ಯೋಜನೆಯಡಿ ನಡೆಯುತ್ತಿರುವ ಕೆರೆ ಹೂಳು ತೆಗೆಯುವ ಕಾಮಗಾರಿಯನ್ನು ಪರಿಶೀಲಿಸಿದ ಸಿಇಓ, ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು.

ಮನ್ನಿಕೇರಿ ಗ್ರಾಮದ ಪಿಎಂಶ್ರೀ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿದ ಅವರು, ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಮಾತನಾಡಿ, ಎಸ್‌ಎಸ್‌ಎಲ್‌ಸಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆತ್ಮವಿಶ್ವಾಸದಿಂದ ಎದುರಿಸುವಂತೆ ಪ್ರೇರೇಪಿಸಿದರು.

ಬೀಳಗಿ ತಾಲೂಕಿನಾದ್ಯಂತ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸಂಜೆ 5.30ರ ನಂತರ ನೋ-ಟಿವಿ ನೋ-ಮೊಬೈಲ್ ಸಮಯ ಜಾರಿಗೊಳಿಸುವಂತೆ ಸೂಚಿಸಿದರು. ಪೋಷಕರು ಹಾಗೂ ಶಿಕ್ಷಕರು ವಿದ್ಯಾರ್ಥಿಗಳು ಈ ಸಮಯವನ್ನು ಅಧ್ಯಯನಕ್ಕೆ ಮೀಸಲಿಡುವಂತೆ ಸಹಕರಿಸಬೇಕು ಎಂದು ತಿಳಿಸಿದರು. ಮನ್ನಿಕೇರಿ ಗ್ರಾಮದಲ್ಲಿ ನಡೆಯುತ್ತಿರುವ ಡಿಬಿಒಟಿ ಯೋಜನೆ-2 ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿದ ಸಿಇಓ, ಕಾಮಗಾರಿಯ ಗುಣಮಟ್ಟ ಹಾಗೂ ಪ್ರಗತಿಯನ್ನು ಪರಿಶೀಲಿಸಿ ಅಗತ್ಯ ಸಲಹೆ-ಸೂಚನೆಗಳನ್ನು ನೀಡಿದರು.

ಬೀಳಗಿ ತಾಲೂಕಾ ಪಂಚಾಯಿತಿ ಕಚೇರಿಗೆ ಭೇಟಿ ನೀಡಿ ವಿವಿಧ ಶಾಖೆಗಳ ಟೇಬಲ್ ಹಾಗೂ ಕಡತಗಳ ತಪಾಸಣೆ ನಡೆಸಿದರು. ಸಾರ್ವಜ ನಿಕರಿಗೆ ಸಂಬಂಧಿಸಿದ ಅರ್ಜಿಗಳು ಹಾಗೂ ಕೆಲಸಗಳನ್ನು ಯಾವುದೇ ವಿಳಂಬವಿಲ್ಲದೆ ವಿಲೇವಾರಿ ಮಾಡು ವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸಾರ್ವಜನಿಕ ಸೇವೆ, ಕುಡಿಯುವ ನೀರು, ಶಿಕ್ಷಣ ಹಾಗೂ ಅಭಿವೃದ್ಧಿ ಕಾಮಗಾರಿಗಳಲ್ಲಿ ಗುಣಮಟ್ಟ ಮತ್ತು ಸಮಯಪಾಲನೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಸಿಇಓ ಸೂಚಿಸಿದರು. ಭೇಟಿ ಸಮಯದಲ್ಲಿ ಆರ್.ಡಿ.ಪಿ.ಆರ್ ವಿಭಾಗದ ಸಹಾಯಕ ನಿರ್ದೇಶಕ ಮಹೇಶ ಜಗಲಿ ಸೇರಿದಂತೆ ಇತರರು ಇದ್ದರು.

ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ತರಬೇತಿ:

ಸಹಕಾರ ಕ್ಷೇತ್ರ ವೃದ್ದಿಯಿಂದ ಮಾತ್ರ ರೈತರ ಕಲ್ಯಾಣ



ಕಲಬುರಗಿ,ಆ.29-

ರೈತ ದೇಶದ ಬೆನ್ನೆಲುಬಾಗಿದ್ದು, ಸಹಕಾರ ಕ್ಷೇತ್ರ ಬೆಳೆದಲ್ಲಿ ಮಾತ್ರ ರೈತನ ಕಲ್ಯಾಣ ಸಾಧ್ಯ ಎಂದು ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷೆ ಸುನಂದಾ ಬಿ. ಪಾಟೀಲ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ. ಬೆಂಗಳೂರು, ಕಲಬುರಗಿ ಜಿಲ್ಲಾ ಸಹಕಾರ ಒಕ್ಕೂಟ ನಿ. ಹಾಗೂ ಸಹಕಾರ ಇಲಾಖೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಶನಿವಾರ ಕಲಬುರಗಿ ನಗರದ ಗುಬ್ಬಿ ಕಾಲೋನಿಯ ಕೆ.ಐ.ಸಿ.ಎಂ ತರಬೇತಿ ಸಂಸ್ಥೆಯಲ್ಲಿ ಆಳಂದ ಮತ್ತು ಅಫಜಲಪೂರ ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಹಕಾರ ಸಂಘಗಳ ಸಿ.ಇ.ಓಗಳು ಸಹಕಾರ ತತ್ವದ ಮೂಲ ಆಶಯವನ್ನು ಅರ್ಥ ಮಾಡಿಕೊಂಡು ಕಾರ್ಯನಿರ್ವಹಿಸುವ ಅಗತ್ಯವಿದೆ. ಸಂಘವು ರೈತರ ಸಹಕಾರದೊಂದಿಗೆ ಲಾಭದಾಯಕ ವ್ಯವಹಾರಗಳನ್ನು ಮಾಡಬೇಕೆಂದು ಕರೆ ನೀಡಿದರು.

ಇದಕ್ಕು ಮುನ್ನ ಕಲಬುರಗಿ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ವೀರಾರೆಡ್ಡಿ ಎಸ್ ಪಾಟೀಲ್ ಅವರು ತರಬೇತಿ ಕಾರ್ಯಕ್ರಮ ಉದ್ಘಾಟಿಸಿದರು.

ರಾಯಚೂರ ಕೃಷಿ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ರವೀಂದ್ರ ಪಾಟೀಲ್ ಅವರು ಒತ್ತಡ ನಿರ್ವಹಣೆ ಕುರಿತು, ಕಲಬುರಗಿ ಸರಕಾರಿ ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಟಿ.ಗುರುಬಸಪ್ಪ ಅವರು ಸಹಕಾರ ಸಂಘಗಳ ಇತ್ತೀಚಿನ ಕಾಯ್ದೆ ತಿದ್ದುಪಡಿ ಸ್ವರೂಪ ಕುರಿತು ಹಾಗೂ ಅರುಣಕುಮಾರ ಹರಸೂರ ಅವರು ಸಹಕಾರ ಸಂಘಗಳ ಲೆಕ್ಕಪತ್ರ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಪಂಡಿತ್, ಮಹೇಶ ಪಸಾರ್, ಆಳಂದ ಸಹಕಾರಿ ಅಭಿವೃದ್ಧಿ ಅಧಿಕಾರಿ ಶಂಕರ ಪಾಟೀಲ್, ಅಫಜಲಪೂರ ಸಹಕಾರಿ ಅಭಿವೃದ್ಧಿ ಅಧಿಕಾರಿ ಚಾಂದ ಭಾಷಾ ಆನ್ಸಾರಿ ಇದ್ದರು.

ಒಂದನೇಯ ಪುಟದಿಂದ

ಮೇಜರ್ ಧ್ಯಾನಚಂದ್‌ರ ಪರಿಶ್ರಮ, ಶಿಸ್ತು, ದೇಶಭಕ್ತಿಯನ್ನು ಅಳವಡಿಸಿಕೊಳ್ಳಿ - ಬಾಲಪ್ಪ ಭಾವಿಮನಿ

ತಿಳಿಸಿದರು.

ದೈಹಿಕ ಶಿಕ್ಷಣ ಶಿಕ್ಷಕಿ ಮಮತಾ ಆದಿ ಪ್ರಾಸ್ತಾವಿಕವಾಗಿ ಮಾತನಾಡಿ, ಈ ದಿನವನ್ನು ನಾವು ಹಾಕಿ ಮಾಂತ್ರಿಕ ಎಂದೇ ಖ್ಯಾತರಾದ ಮೇಜರ್ ಧ್ಯಾನ್ ಚಂದ್ ಅವರ ಜನ್ಮ ದಿನದ ನೆನಪಿಗಾಗಿ ಆಚರಿಸುತ್ತೇವೆ. ಅವರು ಭಾರತಕ್ಕೆ ಹಾಕಿಯಲ್ಲಿ 1928, 1932 ಮತ್ತು 1936 ಒಟ್ಟು 3 ಬಾರಿ ಒಲಿಂಪಿಕ್ ಚಿನ್ನದ ಪದಕವನ್ನು ತಂದುಕೊಟ್ಟ ಮಹಾನ್ ಕ್ರೀಡಾಪಟು. ಅವರ ಕ್ರೀಡಾ ಸಾಧನೆ ಮತ್ತು ದೇಶಭಕ್ತಿಯನ್ನು ಗೌರವಿಸಲು ಭಾರತ ಸರ್ಕಾರವು ಅವರ ಹುಟ್ಟುಹಬ್ಬವನ್ನು ರಾಷ್ಟ್ರೀಯ ಕ್ರೀಡಾ ದಿನವನ್ನಾಗಿ ಘೋಷಿಸಿದೆ. ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಮತ್ತು ಅವರ ಹೆಸರಿನಲ್ಲಿ ದೇಶದ ಅತ್ಯುನ್ನತ ಕ್ರೀಡಾ ಪ್ರಶಸ್ತಿಯನ್ನೇ ನೀಡಲಾಗುತ್ತಿದೆ ಎಂದು ತಿಳಿಸಿದರು.

ಆರೋಗ್ಯವಂತ ದೇಹದಲ್ಲಿ ಆರೋಗ್ಯವಂತ ಮನಸ್ಸು ಇರುತ್ತದೆ ಎಂಬ ಮಾತಿನಂತೆ, ಕ್ರೀಡೆಗಳು ನಮ್ಮ ದೇಹವನ್ನು ಸದೃಢಗೊಳಿಸುತ್ತವೆ, ಮನಸ್ಸಿಗೆ ಉಲ್ಲಾಸ ನೀಡುತ್ತವೆ. ಕ್ರೀಡೆಯಿಂದ ನಮಗೆ ಶಿಸ್ತು, ತಂಡದ ಮನೋಭಾವ, ಸೋಲನ್ನು ಸ್ವೀಕರಿಸುವ ಗುಣ ಮತ್ತು ಗೆಲ್ಲುವ ಛಲ ಬೆಳೆಯುತ್ತದೆ. ಕ್ರೀಡೆ ಕೇವಲ ಸ್ಪರ್ಧೆಯಲ್ಲ, ಅದು ನಮ್ಮ ಜೀವನದ ಒಂದು ಭಾಗವಾಗಬೇಕು. ಓದು ಎಷ್ಟು ಮುಖ್ಯವೋ, ಆಟವೂ ಅಷ್ಟೇ ಮುಖ್ಯ. ಈ ದಿನ ನಾವು ಪ್ರತಿಜ್ಞೆಗೈದು ಪ್ರತಿದಿನ ಕ್ರೀಡೆಯಲ್ಲಿ ತೊಡಗಿಸಿಕೊಂಡು, ನಮ್ಮ ಶಾಲೆಗೆ, ನಮ್ಮ ರಾಜ್ಯಕ್ಕೆ ಮತ್ತು ನಮ್ಮ ದೇಶಕ್ಕೆ ಕೀರ್ತಿ ತರಬೇಕೆಂದು ದೈಹಿಕ ಶಿಕ್ಷಣ ಶಿಕ್ಷಕಿ ಮಮತಾ ಆದಿ ತಿಳಿಸಿದರು.

ನಾಮನಿರ್ದೇಶಿತ ಸದಸ್ಯ ಬಸವರಾಜ ನಾಯಕ ಗೋಸಲ್ ಮಾತನಾಡಿ, ಕ್ರೀಡೆಯಲ್ಲಿ ಸಾಧನೆಗೈದ ಸಾನಿಯಾ ಮಿರ್ಜಾ, ಸಿಂಧೂ ಮಹಿಳೆಯರನ್ನು ಹೆಸರಿಸಿ, ಕ್ರೀಡೆಯು ಜಾತಿ, ಧರ್ಮ ಮೀರಿದ್ದು. ಹೆಣ್ಣು ಮಕ್ಕಳು ಕ್ರೀಡೆಯಲ್ಲಿ ಮುಂದೆ ಬಂದರೆ ಇಡೀ ಕುಟುಂಬ, ಸಮಾಜ ಸದೃಢವಾಗುತ್ತದೆ. ಮೇಜರ್ ಧ್ಯಾನಚಂದ್ ಅವರ ಜೀವನ ಆದರ್ಶಗಳು, ಅವರ ದೇಶಪ್ರೇಮ ಇಂದಿನ ಯುವಜನತೆಗೆ ಮಾದರಿ. ನಮ್ಮ ಶಾಲೆಯ ಹೆಣ್ಣು ಮಕ್ಕಳು ಕ್ಲಸ್ಟರ್ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಪ್ರಶಸ್ತಿ ತಂದಿರುವುದು ಹೆಮ್ಮೆಯ ವಿಷಯ. ನೀವು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ವಿಜೇತರಾದರೆ ನಮ್ಮ ಎಸ್.ಡಿ.ಎಂ.ಸಿ.ಯು ಸಂಪೂರ್ಣ ಸಹಕಾರ ನೀಡಿ, ಕ್ರೀಡಾ ಸಮವಸ್ತ್ರ ತರಿಸಿಕೊಡುತ್ತೇವೆ ಎಂದು ತಿಳಿಸಿದರು.

ಮುಖ್ಯಗುರು ವಿಜಯಲಕ್ಷ್ಮಿ ಮಾತನಾಡಿ, ನಮ್ಮ ಶಾಲೆಯ ಹೆಣ್ಣು ಮಕ್ಕಳು ಕ್ಲಸ್ಟರ್ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಪ್ರಶಸ್ತಿ ತಂದಿರುವುದು ಹೆಮ್ಮೆಯ ವಿಷಯ. ಧ್ಯಾನಚಂದ್ ಅವರಂತೆ ಗುರಿ ಇಟ್ಟುಕೊಂಡು ಸಾಧನೆ ಮಾಡಿ ಎಂದು ಹಾರೈಸಿದರು.

ನಾಮನಿರ್ದೇಶಿತ ಸದಸ್ಯ ಬಸವರಾಜ ಬ್ಯಾಗವಾಟ, ವಿದ್ಯಾರ್ಥಿನಿಯರಾದ ಕುಮಾರಿ ರಂಜಿತಾ, ರೇಣುಕಾ ಕಾರ್ಯಕ್ರಮ ಕುರಿತು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ ಅಧ್ಯಕ್ಷ ವೆಂಕಟೇಶ ನಾಯಕ ಸೋಮಕರ ವಹಿಸಿದ್ದರು.

ಇದೇ ಸಂದರ್ಭದಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ವಿತರಿಸಿ ಗೌರವಿಸಲಾಯಿತು. ವೇದಿಕೆಯಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ನರಸಿಂಗರಾವ್ ಸರಕೀಲ್, ಭೂದಾನಿಗಳಾದ ಅಂಕಿತಾ ಭಾನುಪ್ರಕಾಶ ಖೇಣೇದ್, ದೈಹಿಕ ಶಿಕ್ಷಣ ಶಿಕ್ಷಕ ಹಾಗೂ ಸರಕಾರಿ ನೌಕರರ ಸಂಘದ ಅಧ್ಯಕ್ಷ ಹನುಮಂತರಾಯ ಶಾಖೆ, ಎಸ್.ಡಿ.ಎಂ.ಸಿ ಉಪಾಧ್ಯಕ್ಷರಾದ ದುರುಗಮ್ಮ, ಸದಸ್ಯ ಶಿವಪ್ಪ, ಶರಣಯ್ಯಸ್ವಾಮಿ ಮುಂಡರಗಿ, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ರಂಗನಾಥ ಚಲುವಾದಿ, ಶಿಕ್ಷಕ ಮೃತ್ಯುಂಜಯ, ಕ್ರೀಡಾಕೂಟದ ಶಾಲಾ ವ್ಯವಸ್ಥಾಪಕಿ ಸುಮಿತ್ರಾ, ವಿದ್ಯಾರ್ಥಿ ಪ್ರತಿನಿಧಿಗಳಾದ ಕುಮಾರಿ ರಕ್ಷಿತಾ, ರಂಜಿತಾ ಉಪಸ್ಥಿತರಿದ್ದರು. ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕುಮಾರಿ ರೇಣುಕಾ ಸಂಗಡಿಗರ ಪ್ರಾರ್ಥನೆ ಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶಿಕ್ಷಕ ಬಸವಲಿಂಗಪ್ಪ ಸ್ವಾಗತಿಸಿದರು, ದೇವರಾಜ ಬಡಿಗೇರ ನಿರೂಪಿಸಿದರೆ, ಶಿಕ್ಷಕಿ ಶೋಭಾ ವಂದಿಸಿದರು.

ಕೇಂದ್ರ ಬಸ್ ನಿಲ್ದಾಣದಲ್ಲಿರುವ ಸಾರ್ವಜನಿಕ ಶೌಚಾಲಯದ ನಿರ್ವಹಣೆಯಲ್ಲಿ ಅಕ್ರಮ ಹಾಗೂ ಅವ್ಯವಸ್ಥೆ

ಎಂದು ನಡುಮನಿ ದೂರಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಆಗಸ್ಟ್ 27ರಂದು ಮಹಿಳಾ ಶೌಚಾಲಯದ ಮುಂಭಾಗ ಪುರುಷ ಸಿಬ್ಬಂದಿ ಕುಳಿತಿರುವ ಜಿಪಿಎಸ್ ಫೋಟೋವನ್ನು ದೂರು ಪತ್ರದೊಂದಿಗೆ ಲಗತ್ತಿಸಿರುವುದಾಗಿ ತಿಳಿಸಿದ್ದಾರೆ.

ಆರಾಧನೆ ಮಹೋತ್ಸವದ ವೇಳೆ ಹೆಚ್ಚುವರಿ ವಸೂಲಿ ಆರೋಪ

ಮಂತ್ರಾಲಯ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವದ ಹಿನ್ನೆಲೆಯಲ್ಲಿ ರಾಯಚೂರು ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಹಾಗೂ ಪ್ರಯಾಣಿಕರು ಸಂಚರಿಸುತ್ತಿರುವುದರಿಂದ ಶೌಚಾಲಯ ಬಳಸುವವರ ಸಂಖ್ಯೆ ಹೆಚ್ಚಾಗಿದೆ. ಈ ಸಂದರ್ಭವನ್ನು ದುರುಪಯೋಗಪಡಿಸಿಕೊಂಡು ಪ್ರಯಾಣಿಕರಿಂದ ಹೆಚ್ಚುವರಿ ಹಣ ವಸೂಲಿ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ರಾಯಚೂರು ವಿಭಾಗದಲ್ಲಿ ವಿಭಾಗೀಯ ಕಚೇರಿ ಸೇರಿದಂತೆ ಹಲವು ಘಟಕಗಳು ಹಾಗೂ ಬಸ್ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಯಾಣಿಕರಿಗೆ ಸಮರ್ಪಕ ಹಾಗೂ ವಿಶ್ವಾಸಾರ್ಹ ಸಾರಿಗೆ ಸೇವೆ ಒದಗಿಸುವುದು ನಿಗಮದ ಉದ್ದೇಶವಾಗಿದೆ.

ಮಹಿಳಾ ಆಯೋಗದ ಅಧ್ಯಕ್ಷರು ಸೂಚನೆ ನೀಡಿದ ನಂತರವೂ ಸಮಸ್ಯೆ ಮುಂದುವರಿದಿರುವುದು ಅಧಿಕಾರಿಗಳ ಕರ್ತವ್ಯಲೋಪದ ಪ್ರಶ್ನೆಯನ್ನು ಹುಟ್ಟುಹಾಕಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಿ, ನಿಗದಿತ ದರಕ್ಕಿಂತ ಹೆಚ್ಚಿನ ಶುಲ್ಕ ವಸೂಲಿ ತಡೆಗಟ್ಟಬೇಕು. ಮಹಿಳಾ ಶೌಚಾಲಯಕ್ಕೆ ಮಹಿಳಾ ಸಿಬ್ಬಂದಿಯನ್ನೇ ನಿಯೋಜಿಸಬೇಕು. ಸೂಚನೆ ಪಾಲಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನಡುಮನಿ ಆಗ್ರಹಿಸಿದ್ದಾರೆ.

ನಶಾಮುಕ್ತ ಯುವಜನತೆಯಿಂದಲೇ ವಿಕಸಿತ ಭಾರತ ಸಾಧ್ಯ : ಮೋದಿ ಮನ್ ಕಿ ಬಾತ್

ಬುನಾದಿಯಾಗುತ್ತದೆ ಎಂದು ಹೇಳಿದರು.

ಸ್ವಚ್ಛತೆಗೆ ಯುವಕರ ಕೊಡುಗೆ

ಉತ್ತರ ಪ್ರದೇಶದ ಕ್ಲೀನ್-ಅಪ್ ಪಟ್ವಾಯಿ ಮಾದರಿಯಲ್ಲಿ ಯುವಕರು ಕೆರೆಗಳು ಹಾಗೂ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುತ್ತಿರುವುದನ್ನು ಪ್ರಧಾನಿ ಶ್ಲಾಘಿಸಿದರು. ಶ್ರೀ ಅಮರನಾಥ ಯಾತ್ರೆಯ ಸಂದರ್ಭದಲ್ಲಿಯೂ ಸ್ವಚ್ಛತೆಗೆ ಆದ್ಯತೆ ನೀಡಲಾಗುತ್ತಿದೆ ಎಂದು ಅವರು ಹೇಳಿದರು. ಯಾತ್ರೆಯಲ್ಲಿ ಬಳಸಿದ ಕುದುರೆ ಹಾಗೂ ಹೇಸರಗತ್ತೆಗಳ ಸಗಣಿಯನ್ನು ಜೈವಿಕ ಅನಿಲವಾಗಿ ಪರಿವರ್ತಿಸಿ, ಅದರಿಂದ ಉತ್ಪಾದನೆಯಾಗುವ ಶುದ್ಧ ಶಕ್ತಿಯ ಮೂಲಕ ಸ್ವಚ್ಛ ಜ್ಯೋತಿ ಬೆಳಗಿಸಿರುವುದು ಪರಿಸರ ಸಂರಕ್ಷಣೆಗೆ ಉತ್ತಮ ಉದಾಹರಣೆಯಾಗಿದೆ ಎಂದು ಮೋದಿ ಬಣ್ಣಿಸಿದರು.

ಎಲ್ಲಾರೂ ಸಮಾನರು ,ತಾರತಮ್ಯ ಬೇಡ - ಅಶೋಕಪವಾರ

ದಬ್ಬಾಳಿಕೆ ಮಾಡಿದರೆ ಶಿಕ್ಷಿಸುವ ಹಕ್ಕು ಇದೆ. ಶಾಲೆ, ದೇವಸ್ಥಾನ, ಆಸ್ಪತ್ರೆ, ಹೋಟೇಲ್ ಇನ್ನಿತರ ಸ್ಥಳಗಳಲ್ಲಿ ತಾರತಮ್ಯ ಬೇಡ ಸಹೋದರರಂತೆ ಒಂದಾಗಿ ಬಾಳಬೇಕು ಎಂದರು. ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಮಂಜುನಾಥ ಜಾವುರ್ ಹೊಕ್ರಾಣಿ ಗ್ರಾಮದಲ್ಲಿ ಇತ್ತೀಚಿಗೆ ನಡೆದಿರುವ ಘಟನೆಯನ್ನು ತೀವ್ರವಾಗಿ ಖಂಡಿಸಲಾಗುತ್ತದೆ. ಇಂತಹ ಘಟನೆ ಮರುಕಳಿಸದಂತೆ ಎಚ್ಚರ ವಹಿಸಬೇಕು ಮತ್ತು ಶೌಚಾಲಯ ನಿರ್ಮಿಸಿಕೊಳ್ಳುವ ಮೂಲಕ ಬಹಿರ್ದೇಶ ಮುಕ್ತ ಗ್ರಾಮವನ್ನಾಗಿಸಲು ಜನರ ಸಹಕಾರ ಅತಿ ಅವಶ್ಯಕವೆಂದು

ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಸರ್ಕಾರ ಪ್ರೋತ್ಸಾಹ ಧನ ನೀಡಲಾಗುತ್ತದೆ. ಆದರೆ ಶೌಚಾಲಯ ನಿರ್ಮಿಸಿಕೊಂಡು ಬಳಕೆ ಮಾಡುವವರ ಸಂಖ್ಯೆ ತೀರ ಕಡಿಮೆ ಇರುವ ಕಾರಣ ಮಹಿಳೆಯರು ಶೌಚಾಕ್ಕೆ ಹೊರಗಡೆ ಹೋಗುತ್ತಿದ್ದಾರೆ. ಸರ್ಕಾರ ನೀಡುವ ಪ್ರೋತ್ಸಾಹ ಧನವನ್ನು ಸಮರ್ಪಕವಾಗಿ ಸದುಪಯೋಗ ಪಡೆದುಕೊಂಡು ಶೌಚಾಲಯ ನಿರ್ಮಿಸಿಕೊಂಡು ಬಳಕೆ ಮಾಡಬೇಕು.

ಎಲ್ಲಾ ಅಧಿಕಾರಿಗಳು ಸಾರ್ವಜನಿಕರೊಂದಿಗೆ ಊಟ ಮಾಡಿದರು. ಸಭೆಯಲ್ಲಿ ಗ್ರೇಡ್ -2 ತಹಸೀಲ್ದಾರ್ ಅಬ್ದುಲ್ ವಾಹೀದ್, ಸಮಾಜ ಕಲ್ಯಾಣಾಧಿಕಾರಿ ಸಾಯಿರಾಭಾನು ನದಾಫ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಬಾಗಯ್ಯ ನಾಯಕ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿರುಪಾಕ್ಷಿಸ್ವಾಮಿ, ಕಲ್ಲೂರು ಉಪತಹಸೀಲ್ದಾರ್ ಶ್ರೀನಿವಾಸ ರೆಡ್ಡಿ, ಪಿಎಸ್‌ಐ ಚಂದ್ರಶೇಖರ, ಪಿಆರ್‌ಇಡಿ ಜೆಇ ವೆಂಕಟೇಶ, ಅಬಕಾರಿ ಇಲಾಖೆಯ ಸಬ್ ಇನ್‌ಸ್ಪೆಕ್ಟರ್ ವಿಠಲ ಕಣಜಿ ಸೇರಿದಂತೆ ವಿವಿಧ ಇಲಾಖೆಗಳ ಸಿಬ್ಬಂದಿ, ಶಾಲೆಯ ಮುಖ್ಯಶಿಕ್ಷಕರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಮತ್ತು ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ತ್ರೈಮಾಸಿಕ ದಿಶಾ ಸಭೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ

ಯೋಜನೆ ಅನುಷ್ಠಾನದಲ್ಲಿ ನಿರ್ಲಕ್ಷ್ಯ ಬೇಡ : ಸಂಸದ ಗದ್ದಿಗೌಡರ

ಬಾಗಲಕೋಟೆ,ಆ.30-

ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳು ಹಾಗೂ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ನಿರ್ಲಕ್ಷ್ಯ ಸಲ್ಲದು ಎಂದು ಸಂಸದ ಪಿ.ಸಿ.ಗದ್ದಿಗೌಡರ ಅಧಿಕಾರಿಗಳಿಗೆ ಸೂಚಿಸಿದರು.



ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಶನಿವಾರ ಜರುಗಿದ ಮೊದಲನೇ ತ್ರೈಮಾಸಿಕ ದಿಶಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಹಮ್ಮಿಕೊಂಡ ಪ್ರತಿ ಯೊಂದು ಕಾಮಗಾರಿಗಳನ್ನು ತ್ವರಿತಗಿಯಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳ ಹಿತಾಶಕ್ತಿ ಮುಖ್ಯವಾಗುತ್ತದೆ. ಇಲ್ಲದಿದ್ದರೆ ನಿಗದಿತ ಅವಧಿಯಲ್ಲಿ ಕೆಲಸಗಳು ಆಗುವದಿಲ್ಲ. ಆದ್ದರಿಂದ ಇಚ್ಛಾಶಕ್ತಿಯನ್ನು ಇಟ್ಟುಕೊಂಡ ಕೆಲಸ ಮಾಡುವಂತೆ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಸಭೆಯಲ್ಲಿ ಮುಖ್ಯವಾಗಿ ಶಿಕ್ಷಣ, ಆರೋಗ್ಯ, ಕೃಷಿ, ತೋಟ ಗಾರಿಕೆ, ರೇಷ್ಮೆ ಗ್ರಾಮೀಣ ಕುಡಿ ಯುವ ನೀರಿನ ಯೋಜನೆ, ರಾಷ್ಟ್ರೀಯ ಹೆದ್ದಾರಿ, ಹಿಂದುಳಿದ ವರ್ಗ, ಸಮಾಜ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಕಾರ್ಮಿಕ ಇಲಾಖೆ, ಪಶುಪಾಲನೆ ಹಾಗೂ ಮೀನುಗಾರಿಕೆ, ಹೆಸ್ಕಾಂ, ಅಂಚೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿಯನ್ನು ಪರಿಶೀಲಿಸಲಾಯಿತು.

ಶಿರೂರ-ಗದ್ದನಕೇರಿ ಕ್ರಾಸ್ ವರೆಗಿನ 24.265 ಕಿ.ಮೀ. ಚತುಷ್ಪಥ ರಸ್ತೆ ಕಾಮಗಾರಿಯಲ್ಲಿ 21 ಕಿ.ಮೀ. ಕಾಮಗಾರಿ ಪೂರ್ಣಗೊಂಡಿರುವ ಕುರಿತು ಮಾಹಿತಿ ಪಡೆಯಲಾಯಿತು. ಭೂಸ್ವಾಧೀನ ವಿಳಂಬದಿಂದ ಬಾಕಿ ಉಳಿದಿರುವ ಪ್ರದೇಶಗಳನ್ನು ಹೊರತುಪಡಿಸಿ, ಉಳಿದ ಕಡೆ ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳುವಂತೆ ಸಂಸದರು ಸೂಚಿಸಿದರು. ಕಾಮಗಾರಿ ಕೈಗೆತ್ತಿ ಕೊಂಡಾಗ ತೊಡಕುಗಳು ಬರುವುದು ಸಹಜ ಆದರೆ ಅವುಗಳನ್ನು ಪರಿಹರಿಸಿಕೊಂಡು ಪ್ರಗತಿ ಸಾಧಿಸಬೇಕು ಎಂದರು.

ಆರೋಗ್ಯ ಇಲಾಖೆಯ ಪ್ರಗತಿ ಪರಿಶೀಲನೆ ವೇಳೆ ಎಚ್1ಎನ್1 ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದರು. ಕೆಲವು ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ ಎಂಬ ದೂರುಗಳ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು. ತೋಗುಣಸಿ ಸರ್ಕಾರಿ ಆರೋಗ್ಯ ಕೇಂದ್ರದ ವೈದ್ಯರಿಗೆ ಮೂರು ಕಡೆ ಜವಾಬ್ದಾರಿ ನೀಡಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿದ್ದು, ಅಗತ್ಯವಿರುವ ಕಡೆ ವೈದ್ಯರನ್ನು ನೇಮಕ ಮಾಡಲು ಸೂಚಿಸಿದರು.

ಪ್ರಸಕ್ತ ಹಂಗಾಮಿನಲ್ಲಿ ಮಳೆಯ ಕೊರತೆಯಿಂದ ಜಿಲ್ಲೆಯಲ್ಲಿ ಸುಮಾರು 50 ಸಾವಿರ ಹೆಕ್ಟೇರ್ ಬೆಳೆ ಹಾನಿಯಾಗಿದ್ದು, ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಈ ವರ್ಷ 75 ಸಾವಿರ ರೈತರನ್ನು ವಿಮಾ ವ್ಯಾಪ್ತಿಗೆ ಒಳಪಡಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು. ಜಿಲ್ಲೆಯಲ್ಲಿ ತೋಟಗಾರಿಕೆ ಕ್ಷೇತ್ರವನ್ನು ವಿಸ್ತರಿಸುವುದರ ಜೊತೆಗೆ ರೈತರ ಉತ್ಪನ್ನಗಳ ಸಂಗ್ರಹಣೆಗೆ ಕೋಲ್ಡ್ ಸ್ಟೋರೇಜ್ ಘಟಕಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು. ಕೈಗಾರಿಕಾ ಇಲಾಖೆಯ ಸಹಾಯ ಧನದ ಮೂಲಕ ಹೆಚ್ಚಿನ ಘಟಕಗಳನ್ನು ನಿರ್ಮಿಸಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಅವರು ತಿಳಿಸಿದರು. ಜಿಲ್ಲೆಯಲ್ಲಿ ಎಣ್ಣೆಕಾಳು ಬೆಳೆಗಳ ಪ್ರಮಾಣ ಹೆಚ್ಚಿಸುವ ಹಾಗೂ ಪರಂಪರಾಗತ ಕೃಷಿ ವಿಕಾಸ ಯೋಜನೆಯಡಿ ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡುವಂತೆ ಸೂಚಿಸಿದರು.

ಜಿಲ್ಲೆಯ ಐದು ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಶಾಶ್ವತ ನೀರಿನ ಮೂಲಗಳನ್ನು ಗುರುತಿಸಿ, ಯೋಜನೆ ರೂಪಿಸುವಂತೆ ತಿಳಿಸಿದರು. ಇದೇ ವೇಳೆ ಬಾಗಲಕೋಟೆ-ಕುಡಚಿ ರೈಲು ಮಾರ್ಗದ ಕಾಮಗಾರಿ ಕುರಿತು ಚರ್ಚಿಸಲಾಯಿತು. ಲೋಕಾಪೂರದವರೆಗೆ ಕಾಮಗಾರಿ ಪೂರ್ಣಗೊಂಡಿದ್ದು, ಲೋಕಾಪೂರದಿಂದ ಯಾದವಾಡವರೆಗೆ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ತೊಂದರೆಗಳನ್ನು ಪರಿಹರಿಸಿಕೊಂಡು ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸುವಂತೆ ಸಂಸದರು ಸೂಚಿಸಿದರು.

ಸಭೆಯಲ್ಲಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಪ್ನಿಲ್ ಅಹೀರೆ, ಜಿ.ಪಂ ಮುಖ್ಯ ಯೋಜನಾಧಿಕಾರಿ ಅಲ್ಲಪಮುಪ್ರಭು ಅಲ್ಲಾಪೂರ, ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ನುಲಿಯ ಚಂದಯ್ಯ ಜಯಂತಿ ಭಾವಚಿತ್ರ ಮೆರವಣಿ ಭಜಂತ್ರಿ ಸಮಾಜದವರು ಶಿಕ್ಷಣ ಪಡೆಯಬೇಕು - ಅರಳಪ್ಪ ಯದ್ದಲದಿನ್ನಿ

ಕಾಯಕದಲ್ಲಿ ಶ್ರೇಷ್ಠತೆ ಕಂಡುಕೊಂಡು ಸಮಾಜದ ಏಳಿಗೆಗೆ ಶ್ರಮಿಸಬೇಕು' ಎಂದರು. ಪ.ಪಂಚಾಯತಿ ಮಾಜಿ ಉಪಾಧ್ಯಕ್ಷ ಚನ್ನಪ್ಪ ಗಡ್ಲ ಮಾತನಾಡಿ ಜಾತಿ ಸಂಕೋಲೆಯಿಂದ ಹೊರಬರಬೇಕಾದರೆ ಶಿಕ್ಷಣ ಒಂದೇ ಅಸ್ತ್ರ, ಸರ್ಕಾರಿ ಉಚಿತ ಶಿಕ್ಷಣ ಕೊಡುತ್ತಿದೆ. ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಒಂದೇ ಕೆಲಸವನ್ನು ನಂಬಿಕೊಳದೆ ಇತ್ತರೆ ಕೆಲಸವನ್ನು ಮಾಡಿ ಸಬಲರಾಗಿ ಎಂದರು.

ಅಖಿಲ ಕರ್ನಾಟಕ ಕೊರಮ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕುಮಾರ್ ಭಜಂತ್ರಿ ಚಾಗಬಾವಿ, ತಾಲ್ಲೂಕು ಘಟಕದ ಅಧ್ಯಕ್ಷ

ಬಸವರಾಜ ಭಜಂತ್ರಿ ಸಿರವಾರ, ಉತ್ತರ ಕರ್ನಾಟಕ ಉಪಾಧ್ಯಕ್ಷ ಆರ್. ಭೀಮಣ್ಣ ಆಲ್ಕೋಡ, ಸಣ್ಣ ಹನುಮಂತ ಭಜಂತ್ರಿ, ಚೆನ್ನಪ್ಪ ಕುರಕುಂದ, ಹುನುಗುಂದ ರಾಮಣ್ಣ, ಕರಿಯಪ್ಪ ಶಾಲೆ, ತಿಪ್ಪಣ್ಣ ಮುಂಗ್ಲಿ, ಹುಲಿಗೆಪ್ಪ ಮಾಸ್ತರ ಹರವಿ, ನರಸಪ್ಪ ಹಣಿಗಿ, ಬಸವರಾಜ ಭಜಂತ್ರಿ ಅತ್ತನೂರ, ಕರಿಯಪ್ಪ ಭಜಂತ್ರಿ ಅರಿಕೇರ, ದುರ್ಗಪ್ಪ ಭಜಂತ್ರಿ ಮಲ್ಲಟ, ಮಾದೇವಪ್ಪ ಭಜಂತ್ರಿ, ಅಮರೇಶ ಭಜಂತ್ರಿ ಶೇ,್ ವಿವಿಧ ಸಮಾಜಗಳ ಮುಖಂಡರಾದ ಮಲ್ಲಪ್ಪ ದೊಡ್ಡಮನೆ, ಸೂರಿ ದುರುಗಣ್ಣ ನಾಯಕ, ಎನ್.ಮಲ್ಲಪ್ಪ, ಯಲ್ಲಪ್ಪ ದೊರೆ ಸೇರಿ ಸಮಾಜದ ಯುವಕರು, ಮಹಿಳೆಯರು ಭಾಗವಹಿಸಿದ್ದರು.

ಉದ್ಯಮಗಳಿಂದ ಮಹಿಳೆಯರ ಉಜ್ವಲ ಭವಿಷಕ್ಕೆ ದಾರಿ: ಜಿ.ಯು.ಹ್ಮಡೆದ

ಸೌಲಭ್ಯಗಳ ಬಗ್ಗೆ, ಲೆಕ್ಕಪತ್ರ ನಿರ್ವಹಣೆ, ಯೋಜನಾ ವರದಿ ತಯಾರಿಕೆ, ಸಾಲ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವಲ್ಲಿ ಸಹಾಯ ನೀಡುವದು ಹಾಗೂ ಈಗಾಗಲೇ ಸಿಡಾಕ್ ಮುಖಾಂತರ ತರಬೇತಿ ಪಡೆದು ಉದ್ಯಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿರುವ ಉದ್ಯಮಶೀಲರ ಅನುಭವ ಹಂಚಿಕೆ ಮತ್ತು ಸಂಬಧಪಟ್ಟ ಇತ್ಯಾದಿ ವಿಷಯಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ, ಇಲಾಖೆ ಅಧಿಕಾರಿಗಳು ಹಾಗೂ ಬ್ಯಾಂಕ್ ಅಧಿಕಾರಿಗಳಿಂದ ಉಪನ್ಯಾಸ ಹಾಗೂ ಮಾಹಿತಿ ನೀಡಲಾಗುತ್ತದೆ ಎಂದರು.

ಉದ್ಘಾಟನ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಸಿಡಿಪಿಓ ದೀಪಿಕಾ ಅವರು ಮಾತನಾಡಿ, ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮವನ್ನು ಯಾವುದೇ ವ್ಯಾಪಾರೋದ್ಯಮಗಳನ್ನು ಪ್ರಾರಂಭಿಸಲು ಮಾನಸಿಕ ಸಿದ್ದತೆಯನ್ನು ಮಾಡಿಕೊಂಡು ಈ ತರಬೇತಿಯ ಮೂಲಕ ಯಶಸ್ವಿ ಉದ್ಯಮಶೀಲರಾಗಬೇಕು ಎಂದರು.

ಈ ಉದ್ಘಾಟನ ಸಮಾರಂ ಭದಲ್ಲಿ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಸುರೇಶ ಕಾರ್ಯಕ್ರಮದ ವ್ಯವಸ್ಥಪಕರು ಎಸ್ ವಿ ವಾಯ್ ಎಮ್, ರಾಯಚೂರು ಇವರು ಸರಿಯಾದ ಗುರಿಯನ್ನು ಇಟ್ಟು ಕೊಂಡು ಆ ಗುರಿಯನ್ನು ಮುಟ್ಟಲು ಸತತ ಪ್ರಯತ್ನ, ದಕ್ಷತೆ, ಪ್ರಾಮಾ ಣಿಕತೆ, ಧನಾತ್ಮಕ ಆಲೋಚ ನೆಗಳನ್ನು ಬೆಳೆಸಿಕೊಳ್ಳಬೇಕು ಆತ್ಮ ವಿಶ್ವಾದಿಂದ ಉದ್ಯಮಗಳನ್ನು ಪ್ರಾರಂಭಿಸಿದಲ್ಲಿ ಯಶಸ್ವಿಯಾಗಲು ಸಾಧ್ಯವಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಅಬ್ದುಲ್ ರಹಿಮ್, ಹನುಮಂತ, ಉದ್ಯೋಗ ನಿಯೋಜನಾ ಅಧಿಕಾರಿಗಳು ಮಾಲಾ ಕುಲಕರ್ಣಿ ಸೇರಿದಂತೆ ಇತರರು ಇದ್ದರು. ಜ್ಯೋತಿ ಅವರು ಕಾರ್ಯಕ್ರಮವನ್ನು ಪ್ರಾರ್ಥಿಸಿದರು, ಶ್ರೀ ನಾಗರಾಜ ಕೆ, ತರಬೇತಿ ಅಧಿಕಾ ರಿಗಳು, ಸಿಡಾಕ್, ರಾಯಚೂರು ಇವರು ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರು. ಹನುಮಂತ ಇವರು ವಂದನಾರ್ಪಣೆ ಮಾಡಿದರು. ಸಭೆಯಲ್ಲಿ ತರಬೇತಿ ಪಡೆಯಲು 30 ಅಭ್ಯರ್ಥಿಗಳು ಹಾಜರಿದ್ದರು.

ಗುಂಜಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಡಿಹೆಚ್‌ಒ ಡಾ. ನಂದಿತಾ ಭೇಟಿ

ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದು ಸೂಚಿಸಿದರು.

ತಾಯಿ-ಮಕ್ಕಳ ಆರೋಗ್ಯ ಕಾರ್ಯಕ್ರಮದಡಿ ಅಗತ್ಯ ಔಷಧ, ಲಸಿಕೆಗಳು ಹಾಗೂ ನಾಯಿ ಮತ್ತು ಹಾವು ಕಡಿತಕ್ಕೆ ನೀಡುವ ಜೀವರಕ್ಷಕ ಔಷಧಗಳು ಸದಾ ಲಭ್ಯವಿರುವಂತೆ ದಾಸ್ತಾನು ನಿರ್ವಹಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಗುಣಮಟ್ಟದ ಆರೋಗ್ಯ ಸೇವೆಗಳು ಲಭ್ಯವಿದ್ದು, ಗ್ರಾಮೀಣ ಭಾಗದ ಸಾರ್ವಜನಿಕರು ಅವುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಡಾ. ನಂದಿತಾ ಮನವಿ ಮಾಡಿದರು.

ಈ ಸಂದರ್ಭದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ. ಸತೀಶ್, ವೈದ್ಯಾಧಿಕಾರಿ ಡಾ. ಸುಚಿತ್ ಪಾಟೀಲ್, ಶುಶ್ರೂಷಣಾಧಿಕಾರಿ ಆರೀಫ್, ಎಲ್‌ಟಿಓ ಸೈಯದ್ ಆರೀಫಾ, ಆಸ್ಪತ್ರೆಯ ಸಿಬ್ಬಂದಿ, ತಾಯಂದಿರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು..

ಬುದ್ಧ ಪ್ರಜ್ಞಾ ಮಕ್ಕಳ ಮೈತ್ರಿ ಹಬ್ಬ ಪೋಸ್ಟರ್ ಬಿಡುಗಡೆ ಮಕ್ಕಳಗಳಲ್ಲಿ ಬುದ್ಧರ ಪ್ರಜ್ಞಾ ಬೆಳೆಸಬೇಕು - ಡಾ.ಷಣ್ಮುಖ

ಗೊಳಿಸಲಾಯಿತು.

ನಂತರ ಪ.ಜಾ ಮತ್ತು ಪ.ಪಂಗಡದ ನೌಕರರ ಸಂಘದ ವಿಭಾಗಿಯ ಉಪಾಧ್ಯಕ್ಷರಾದ ಸಂತೋಷ ನಂದಿನಿ ಇಂದು ಸಮಾಜ ವಿಷಮಯ ವಾದ ವಾತಾವರಣದಲ್ಲಿ ನಮ್ಮ ಮಕ್ಕಳು ಬೆಳೆಯುತ್ತಿದ್ದಾರೆ ಈ ವಾತಾವರಣದಿಂದ ಮಕ್ಕಳನ್ನ ಹೊರಗೆ ತಂದು ಬುದ್ಧ ಪ್ರಜ್ಞಾ ಬೆಳೆಸುವ ಉದ್ದೇಶದಿಂದ ಕಾರ್ಯಕ್ರಮ ದ ರೂಪರೇಷಗಳನ್ನ ತಿಳಿಸಿದರು.

ಸದರಿ ಕಾರ್ಯಕ್ರಮದಲ್ಲಿ ಬಸವರಾಜ್ ಭಂಡಾರಿ ಸಿರವಾರ, ಪ್ರಭು ಹೇಮನಳ, ಧಮ್ಮ ಉಪಸಕರಾದ, ಕರ್ನಾಟಕ ಸರಕಾರಿ ನೌಕರರ ಸಂಘ ತಾಲೂಕು ಘಟಕ ಉಪಾಧ್ಯಕ್ಷರಾದ ಚನ್ನಬಸವ ಶಿಕ್ಷಕರು, ಬಸವರಾಜ ಶಿಕ್ಷಕರು, ಶಿಕ್ಷಕರ ಸಂಘದ ಸಿರವಾರ ತಾಲೂಕ ಅಧ್ಯಕ್ಷ ಮಹೇಶ್, ಬೌದ್ಧ ಉಪಾಸಕರಾದ ಶಾಂತಪ್ಪ ಪಿತಾಗಲ್, ಮರಲಿಂಗಪ್ಪ ಹೆಗ್ಗಡದಿನ್ನಿ, ಶಿವುಕುಮಾರ ಹೆಗ್ಗಡದಿನ್ನಿ, ವಿಜಯಕುಮಾರ ಹೆಗ್ಗಡದಿನ್ನಿ, ಶಿವುಕುಮಾರ ಹೆಗ್ಗಡ ದಿನ್ನಿ, ತಿಮ್ಮಣ್ಣ ಮರಾಠ ರಮೇಶ ಇಂದಿರಾ ನಗರ ಸಿರವಾರ, ಗುರಪ್ಪ ಸಿರವಾರ, ಕ.ಕಾ.ಪತ್ರಕರ್ತ ಸಂಘದ ತಾಲೂಕ ಅಧ್ಯಕ್ಷ ಹನುಮೇಶ ಮುಂತಾದವರು ಭಾಗವಹಿಸಿದ್ದರು.



ವಿದ್ಯಾರ್ಥಿಗಳಿಗೆ ರಾಖಿ ಕಟ್ಟಿದ ವಿದ್ಯಾರ್ಥಿನಿಯರು, ಸಹಪಾಠಿಗಳಿಗೆ ಸಹೋದರ ಬಾಂಧವ್ಯ

ಬಾಗಲಕೋಟೆ,ಆ.30-

ಅಣ್ಣ ತಂಗಿಯ ನಡುವಿನ ಪ್ರೀತಿ, ವಿಶ್ವಾಸ,ರಕ್ಷಣೆಯ ಭರವಸೆಯನ್ನು ಗಟ್ಟಿಗೊಳಿಸು ಈ ಪವಿತ್ರ ರಕ್ಷಾ ಬಂದನವನ್ನು ಬಿವಿವಿ ಸಂಘದ ಬಸವೇಶ್ವರ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಂದ ಅರ್ಥಪೂರ್ಣ ರಕ್ಷಾ ಬಂಧನವನ್ನು ಆಚರಿಸಲಾಯಿತು.

ಮಹಾವಿದ್ಯಾಲಯ ಪ್ರಭಾರಿ ಪ್ರಾಚಾರ್ಯರ ಮಾರ್ಗದರ್ಶನದಲ್ಲಿ ಶುಕ್ರವಾರ ಕಾಲೇಜಿ ಎಲ್ಲ ವಿದ್ಯಾರ್ಥಿ ಸಹಪಾಠಿಗಳು ಮಹಾವಿದ್ಯಾಲಯದ ಆವರಣದಲ್ಲಿ ಜಮಾವಣೆಗೊಂಡು ಸ್ವಯಂ ಪ್ರೇರಣೆಯಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಯರು ಹಣೆಗೆ ತೀಲಕನಿಟ್ಟು ರಾಖಿ ಕಟ್ಟಿ ಆರತಿ ಮಾಡಿ ಸಿಹಿ ತಿನ್ನಿಸಿದರು, ರಾಖಿ ಕಟ್ಟಿಸಿಕೊಂಡ ವಿದ್ಯಾರ್ಥಿಗಳು ಸಹ ಸಿಹಿ ತಿನ್ನಿಸಿ ಸಹೋದರಿಯರಿಗೆ ನಮಸ್ಕಾರ ಮಾಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿ ವಿದ್ಯಾರ್ಥಿನಿ ಸಂಗೀತಾ ಕರಿಯನ್ನವರ ಈ ರಕ್ಷಾ ಬಂಧನ ಅಣ್ಣ ತಂಗಿಯರ ಭಾಂದ್ಯವ್ಯವನ್ನು ಗಟ್ಟಿಗೊಳಿಸುತ್ತದೆ, ಸಹೋದರತ್ವ ಭಾವನೆಯಿಂದ ಅತ್ಯಾಚಾರದಂತಹ ಘಟನೆಗಳು ಕಡಿಮೆಯಾಗುತ್ತವೆ, ಇಂದು ನಮ್ಮ ಸಹೋದರರಿಗೆ ರಾಖಿ ಕಟ್ಟುತ್ತಿರುವುದು ತುಂಬಾನೆ ಖುಷಿ ಕೊಟ್ಟಿದೆ ಎಂದರು,

ಕಾಲೇಜಿನ ಪ್ರಭಾರಿ ಪ್ರಾಚಾರ್ಯ ಶಾಂತಕುಮಾರ ಒಂಟಗೂಡಿ ಮಾತನಾಡಿ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಲ್ಲಿ ಪರಸ್ಪರ ಸಹೋದರತ್ವ ಭಾಂದ್ಯವ ಬೆಳೆಸಲೂ ಈ ರಕ್ಷಾ ಬಂಧನವನ್ನು ಹಮ್ಮಿಕೊಂಡಿದೆ, ಕೆಲವು ವಿದ್ಯಾರ್ಥಿಗಳ ಮನೆಯಲ್ಲಿ ಅಣ್ಣ ಇದ್ದರೆ ತಂಗಿ ಇರಲ್ಲ, ಅಂಥವರು ಇಲ್ಲಿ ಸಹೋದರ ಸಹೋಧರಿಯರನ್ನು ಪಡೆಯಬಹುದು.

ರಕ್ಷಾ ಬಂಧನ ಇದೊಂದು ಸಾಂಸ್ಕೃತಿಕ ಹಬ್ಬ, ಈಹಬ್ಬದ ಪ್ರಭಾವದಿಂದ ಕಾಲೇಜಿನ ವಾತಾವರಣ ಶುಧ್ಧವಾಗಿರುತ್ತದೆ, ಕಾಲೇಜಿನ ಎಲ್ಲ ಶಿಕ್ಷಕ ವೃಂದ ಜೊತೆ ಗೂಡಿ ಎಲ್ಲ ವಿದ್ಯಾರ್ಥಿಗಳು ರಕ್ಷಾ ಹಬ್ಬವನ್ನು ಆಚರಿಸಿದ್ದು ವಿಶೇಷವಾಗಿತ್ತು ಎಂದರು. ಈ ರಕ್ಷಾ ಬಂಧನ ಆಚರಣೆಯಲ್ಲಿ ಸುಮಾರು 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವೈದ್ಯಕೀಯ ಜ್ಞಾನ ನಿರಂತರವಾಗಿ ನವೀಕರಣಗೊಳ್ಳಲು ಸಿಎಂಇ ಸಹಕಾರಿ : ಪ್ರೊ.ಅಶ್ಫಾಕ್ ಅಹ್ಮದ್

ಕಲಬುರಗಿ,ಆ.30-

ವೈದ್ಯಕೀಯ ಕ್ಷೇತ್ರದಲ್ಲಿ ಜ್ಞಾನ ಮತ್ತು ಕೌಶಲ್ಯವನ್ನು ನಿರಂತರವಾಗಿ ನವೀಕರಿಸಿಕೊಳ್ಳಲು ನಿರಂತರ ವೈದ್ಯಕೀಯ ಶಿಕ್ಷಣ (ಸಿಎಂಇ) ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದು ಖಾಜಾ ಬಂದಾನವಾಜ ವಿಶ್ವವಿದ್ಯಾಲಯದ ಸಮ-ಉಪಕುಲಪತಿ ಪ್ರೊ. ಅಶ್ಫಾಕ್ ಅಹ್ಮದ್ ಹೇಳಿದರು.

ಖಾಜಾ ಬಂದಾನವಾಜ ವಿಶ್ವವಿದ್ಯಾಲಯದ ವೈದ್ಯಕೀಯ ನಿಕಾಯದ ಪ್ಯಾಥಾಲಜಿ ಹಾಗೂ ಫಿಜಿಯಾಲಜಿ ವಿಭಾಗಗಳ ವತಿಯಿಂದ ಶನಿವಾರ ಆಯೋಜಿಸಿದ್ದ ಇನ್ಸೈಡ್ ದಿ ಮ್ಯಾರೋ: ಬ್ರಿಡ್ಜಿಂಗ್ ಹೆಮಟೊಪೊಯಿಸಿಸ್ ಮತ್ತು ಹೆಮಟೊಪಾಥಾಲಜಿ ವಿಷಯದ ಸಿಎಂಇ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಸಿಎಂಇ ಕಾರ್ಯಕ್ರಮಗಳನ್ನು ಕೇವಲ ವರದಿ ತಯಾರಿಸುವ ಉದ್ದೇಶಕ್ಕೆ ಸೀಮಿತಗೊಳಿಸದೆ, ಅರ್ಥಪೂರ್ಣವಾಗಿ ಆಯೋಜಿಸಿ ಅದರ ಪ್ರಯೋಜನ ಸಮಾಜಕ್ಕೆ ತಲುಪುವಂತೆ ಮಾಡಬೇಕು. ಸಿಎಂಇಯಲ್ಲಿ ಮಂಡಿಸಲಾದ ವಿಷಯಗಳ ಕುರಿತು ಕಾಲಾಂತರದಲ್ಲಿ ಅಧ್ಯಯನ ಹಾಗೂ ಸಂಶೋಧನೆ ನಡೆಸುವ ಅಗತ್ಯವಿದೆ ಎಂದರು.

ಕೆಬಿಎನ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗುವ ಎಲ್ಲ ಸಿಎಂಇ ಕಾರ್ಯಕ್ರಮಗಳ ಮಾಹಿತಿಯನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಜನೆ ಹೊಂದಿರುವುದಾಗಿ ಅವರು ತಿಳಿಸಿದರು. ವೈದ್ಯಕೀಯ ನಿಕಾಯದ ಡೀನ್ ಡಾ. ಗುರುಪ್ರಸಾದ್ ಕಾರ್ಯಕ್ರಮದ ಆಯೋಜಕರಿಗೆ ಅಭಿನಂದನೆ ಸಲ್ಲಿಸಿದರು.

ಕಲಬುರಗಿ ಪ್ಯಾಥಾಲಜಿ ಅಸೋಸಿಯೇಷನ್ ಅಧ್ಯಕ್ಷ ಹಾಗೂ ಹಿರಿಯ ಸಲಹಾ ಪ್ಯಾಥಾಲಜಿಸ್ಟ್ ಡಾ. ಎ.ವಿ. ದೇಶಮುಖ ಮಾತನಾಡಿ, ಸಿಎಂಇ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಹೊಸ ಕೌಶಲ್ಯ ಹಾಗೂ ಜ್ಞಾನವನ್ನು ಕಲಿಯಲು ಅನುಕೂಲವಾಗುತ್ತವೆ ಎಂದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಬಲಪ್ರಯೋಗ: ಹೊಣೆಗಾರಿಕೆ ನಿಗದಿಯಾಗಲಿ

ಕಾನೂನು ತನ್ನ ಕೆಲಸ ತಾನು ಮಾಡುತ್ತದೆ, ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬಂಥ ನುಡಿಮುತ್ತುಗಳು ರಾಜಕಾರಣಿಗಳ ಭಾಷಣಗಳಲ್ಲಿ, ಶಾಸನಸಭೆ ಕಲಾಪಗಳಲ್ಲಿ, ಸಿನೆಮಾಗಳಲ್ಲಿ... ಹೀಗೆ ಬೇರೆ ಬೇರೆ ವೇದಿಕೆಗಳಲ್ಲಿ ಸಂದರ್ಭಾನುಸಾರ ಕೇಳಿಬರುತ್ತಲೇ ಇರುತ್ತವೆ. ಆದರೆ ವಸ್ತುಸ್ಥಿತಿ ಬೇರೆಯೇ ಇದೆ. ಆದರ್ಶದ ಮಾತುಗಳು ಭಾಷಣಗಳಿಗೆ, ಪುಸ್ತಕಗಳಿಗೆ, ವೇದಿಕೆಗಳಿಗೆ ಸೀಮಿತವಾಗಿವೆ ಎಂಬ ಭಾವನೆಯನ್ನು ಮತ್ತಷ್ಟು ದೃಢಪಡಿಸುವಂಥ ನಿದರ್ಶನಗಳು ಬೇರೆ ಬೇರೆ ರೂಪಗಳಲ್ಲಿ ಕಾಣಸಿಗುತ್ತವೆ. ದಿಲ್ಲಿಯ ಜಂತರ್ ಮಂತರ್‌ನಲ್ಲಿ ಜುಲೈ 20ರಂದು ನಡೆದ ವಿದ್ಯಾರ್ಥಿಗಳ ಪ್ರತಿಭಟನೆ ಸಂದರ್ಭದಲ್ಲಿ ಒಬ್ಬ ಯುವಕನ ಮೇಲೆ ನಡೆದ ಪೆಲೆಟ್ ಗನ್ ದಾಳಿಗೆ ಸಂಬಂಧಿಸಿದಂತೆ ಪೊಲೀಸರು ಎಫ್‌ಐಆರ್ ದಾಖಲಿಸಲು ಸತಾಯಿಸಿದ ಪರಿ, ಕಾನೂನು ತನ್ನ ಕೆಲಸ ತಾನು ಮಾಡುತ್ತದೆ ಎಂಬ ನುಡಿಗಟ್ಟನ್ನು ಅಣಕಿಸುವ ರೀತಿಯಲ್ಲಿ ಇತ್ತು. ಪೆಲೆಟ್ ಗುಂಡು ದಾಳಿಯ ಪ್ರಕರಣದಲ್ಲಿ ದಿಲ್ಲಿ ಪೊಲೀಸರ ಎದುರು ನ್ಯಾಯಯುತವಾದ ಒಂದು ಸಣ್ಣ ಬೇಡಿಕೆ ಇತ್ತು. ಆ ಬೇಡಿಕೆಗೆ ಸ್ಪಂದಿಸಲು ಪೊಲೀಸರು ಮೀನಮೇಷ ಎಣಿಸಿದರು, ಒಪ್ಪಿಕೊಳ್ಳಲು ನಿರಾಕರಿಸಿದರು. ಸಹಜವಾಗಿ ಮತ್ತು ಯಾವುದೇ ಸದ್ದುಗದ್ದಲ ಇಲ್ಲದೆ ನಡೆಯಬೇಕಾಗಿದ್ದ ಒಂದು ಕಾನೂನು ಪ್ರಕ್ರಿಯೆಯನ್ನು ಪೊಲೀಸರು ಹಾದಿಬೀದಿ ರಂಪವಾಗುವಂತೆ ಹಾಗೂ ಅದಕ್ಕೆ ರಾಜಕೀಯ ರಾಡಿ ಮೆತ್ತಿಕೊಳ್ಳುವಂತೆ ಮಾಡಿದರು.

ಪೆಲೆಟ್ ಗುಂಡು ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡು ಕಣ್ಣೊಂದರ ದೃಷ್ಟಿ ನಷ್ಟವಾಗಿದೆ ಎನ್ನಲಾದ ಯುವಕನ ದೂರಿನ ಅನುಸಾರ ಪೊಲೀಸರು ಎಫ್‌ಐಆರ್ ದಾಖಲಿಸಲು ನಿರಾಕರಿಸಿದರು. ಬಾಧಿತ ವ್ಯಕ್ತಿ ದೂರು ನೀಡಿದಾಗ ಪ್ರಕರಣ ದಾಖಲಿಸಿಕೊಳ್ಳುವುದು ಪೊಲೀಸರ ಕರ್ತವ್ಯವಾಗಿತ್ತು. ಆದರೆ ಅದನ್ನು ಪಾಲಿಸುವಲ್ಲಿ ಅವರು ವಿಫಲರಾದರು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕಾನೂನಿನ ಆಳ್ವಿಕೆಗೆ ಸಂಬಂಧಿಸಿದ ಜವಾಬ್ದಾರಿಯನ್ನು ಮತ್ತು ಉತ್ತರದಾಯಿತ್ವವನ್ನು ಎತ್ತಿಹಿಡಿಯುವಲ್ಲಿ ಅವರು ಸೋತ ಪರಿಣಾಮವಾಗಿ ಪ್ರತಿಭಟನೆಗಳು ವ್ಯಕ್ತವಾದವು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಆರು ತಾಸುಗಳ ಕಾಲ ಧರಣಿ ನಡೆಸಿದ ಬಳಿಕವಷ್ಟೇ, ಪ್ರಜೆಯೊಬ್ಬನ ಹಕ್ಕಾಗಿರುವ ಸಾಮಾನ್ಯ ಕಾನೂನು ಪ್ರಕ್ರಿಯೆಯ ಪಾಲನೆಗೆ ಪೊಲೀಸರು ಮುಂದಾಗಿದ್ದು ನಮ್ಮ ಕಾನೂನು ಜಾರಿ ವ್ಯವಸ್ಥೆಯ ದಯನೀಯ ಸ್ಥಿತಿಯನ್ನು ಎತ್ತಿ ತೋರಿಸುವಂತಿದೆ. ಪೊಲೀಸರು ಈಗ ಎಫ್‌ಐಆರ್ ದಾಖಲಿಸಿಕೊಂಡಿರುವುದು ಸಾರ್ವಜನಿಕವಾಗಿ ವ್ಯಕ್ತವಾದ ಒತ್ತಡದಿಂದಲೇ ಹೊರತು ಕಾನೂನು ಆಳ್ವಿಕೆಯ ಹೊಣೆಗಾರಿಕೆಯ ಭಾಗವಾಗಿ ಅಲ್ಲ ಎಂದು ಯಾರಾದರೂ ಭಾವಿಸಿದರೆ ಅದು ಅವರ ತಪ್ಪಲ್ಲ. ಅದಕ್ಕೆ ಕಾರಣರಾದವರು ದಿಲ್ಲಿ ಪೊಲೀಸರು. ಜನತಂತ್ರದ ಆಶಯ ಮತ್ತು ಪಾರದರ್ಶಕ ಆಡಳಿತಕ್ಕೆ ವಿರುದ್ಧವಾದ ಇಂತಹ ನಡೆ ಖಂಡನಾರ್ಹ.

ಪೆಲೆಟ್ ಗುಂಡುಗಳಿಂದ ಗಾಯಗೊಂಡಿರುವ ಸಾಹಿಲ್ ಲೊಚಬ್ ಎನ್ನುವ ವಿದ್ಯಾರ್ಥಿ ಈ ತಿಂಗಳ 14ರಂದು ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಳ್ಳುವಂತೆ ಪ್ರತೀ ದಿನ ಮನವಿ ಮಾಡಿಕೊಳ್ಳುತ್ತಿದ್ದರು. ಆದರೆ ಅವರ ಮನವಿಗೆ ಸಕಾರಾತ್ಮಕ ಸ್ಪಂದನ ವ್ಯಕ್ತವಾಗಲೇ ಇಲ್ಲ. ಎಫ್‌ಐಆರ್ ದಾಖಲಿಸಲು ತೊಡಕಾಗುವಂತಹ ಯಾವ ಸಮರ್ಪಕ ಕಾರಣವೂ ಪೊಲೀಸರಿಗೆ ಇರಲಿಲ್ಲ. ಅಂದಮೇಲೆ ನಿರಾಕರಣೆಯ ಹಿಂದೆ ಯಾರದೋ ಒತ್ತಡ ಇದ್ದಿರಬೇಕು. ಇಲ್ಲವೇ, ಯಾರನ್ನೋ ಮೆಚ್ಚಿಸುವಂತಹ ದುರುದ್ದೇಶ ಅಡಗಿರಬೇಕು. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ನೈತಿಕ ಹೊಣೆ ಹೊತ್ತು ಶಿಕ್ಷಣ ಸಚಿವರಾಗಿದ್ದ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಜಂತರ್ ಮಂತರ್‌ನಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ನೂರಾರು ವಿದ್ಯಾರ್ಥಿಗಳ ಮೇಲೆ ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ಪೊಲೀಸರ ಕೈಗಳು ಭೀಮಬಲ ಪಡೆದಿದ್ದವು. ಆದರೆ ಒಬ್ಬ ನೊಂದ ವಿದ್ಯಾರ್ಥಿಯ ದೂರಿಗೆ ಸ್ಪಂದಿಸಬೇಕಾದಂತಹ ಹೊತ್ತಲ್ಲಿ ಅವರ ಕೈಗಳು ಬಲ ಕಳೆದುಕೊಂಡಿದ್ದವು! ಆ ವೇಳೆ, ವಿದ್ಯಾರ್ಥಿ ಬೇಡಿಕೆಗೆ ಬೆಂಬಲವಾಗಿ ರಾಹುಲ್ ಗಾಂಧಿ ಬೀದಿಗೆ ಇಳಿದಿದ್ದು ಸಮಯೋಚಿತವಾಗಿತ್ತು. ಒಬ್ಬ ವಿರೋಧ ಪಕ್ಷದ ನಾಯಕ ನಡೆದುಕೊಳ್ಳಬೇಕಾದ ರೀತಿಯಲ್ಲೇ ಅವರು ನಡೆದುಕೊಂಡರು. ರಾಹುಲ್ ಅವರು ಅಗ್ಗದ ಪ್ರಚಾರಕ್ಕಾಗಿ ದಿಕ್ಕುತಪ್ಪಿಸುವ ರಾಜಕಾರಣ ಮಾಡುತ್ತಿದ್ದಾರೆ ಎಂಬ ಟೀಕೆಗಳು ಆಳುವ ವರ್ಗದಿಂದ ವ್ಯಕ್ತವಾದರೂ ಅವುಗಳಲ್ಲಿ ಯಾವುದೇ ಹುರುಳಿರಲಿಲ್ಲ ಎಂಬುದು ಸಾಮಾನ್ಯ ಜನರಿಗೂ ಮನವರಿಕೆಯಾಗುವಂತೆ ಮಾಡಲು ನೆರವಾಗಿದ್ದು ದಿಲ್ಲಿ ಪೊಲೀಸರ ನಿರ್ಲಜ್ಜ ನಡೆ ಎಂಬುದರಲ್ಲಿ ಎರಡು ಮಾತಿಲ್ಲ. ರಾಹುಲ್ ಅವರು ಧರಣಿ ಕುಳಿತುಕೊಳ್ಳುವಂತಹ ಪರಿಸ್ಥಿತಿಯನ್ನು ಸೃಷ್ಟಿಸಿದ್ದೇ ಪೊಲೀಸರು. ಆಡಳಿತ ಪಕ್ಷದ ಮರ್ಜಿ ಕಾಯಲು ಹೋಗಿ ವಿರೋಧ ಪಕ್ಷಕ್ಕೆ ಒಂದಷ್ಟು ರಾಜಕೀಯ ಪ್ರಯೋಜನ ದೊರಕಿಸಿಕೊಟ್ಟರು. ನ್ಯಾಯವನ್ನು ಅಪೇಕ್ಷಿಸಿ ಮಾಡುವ ಪ್ರತಿಭಟನೆಗಳನ್ನು ಹೀಗಳೆಯುವುದು ಮತ್ತು ಅಂತಹ ಪ್ರತಿಭಟನೆಗಳಿಗೆ ಇಲ್ಲಸಲ್ಲದ ಹಣೆಪಟ್ಟಿ ಅಂಟಿಸುವಂತಹ ನಡೆ ತರವಲ್ಲ. ಈ ಬಗೆಯ ಮಾತುಗಳನ್ನು ಅಪ್ರಬುದ್ಧ ಎಂದು ಗುರುತಿಸುವಷ್ಟು ನಮ್ಮ ಜನ ಪ್ರಬುದ್ಧರಾಗಿದ್ದಾರೆ ಎಂದು ಆಡಳಿತ ಪಕ್ಷದ ಮುಖಂಡರು ಇನ್ನಾದರೂ ಗ್ರಹಿಸಬೇಕು.

ದಿಲ್ಲಿಯ ಜಂತರ್ ಮಂತರ್‌ನಲ್ಲಿ ಜುಲೈ 20ರಂದು ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರು ಅತಿಯಾದ ಬಲಪ್ರಯೋಗ ನಡೆಸಿದ್ದಾರೆ ಮತ್ತು ಮಹಿಳೆಯರೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ ಎನ್ನುವ ಆರೋಪಗಳ ತನಿಖೆಗಾಗಿ ನ್ಯಾಯಮೂರ್ತಿ ಆರ್. ಸುಭಾಷ್ ರೆಡ್ಡಿ ಅವರ ನೇತೃತ್ವದಲ್ಲಿ ಸುಪ್ರೀಂ ಕೋರ್ಟ್ ಉನ್ನತ ಮಟ್ಟದ ಸಮಿತಿ ರಚಿಸಿದೆ. ಇದು ಸ್ವಾಗತಾರ್ಹ. ತನಿಖೆಯಿಂದ ಸತ್ಯಾಂಶ ಹೊರಬರಬಹುದೆಂದು ನಿರೀಕ್ಷಿಸೋಣ. ಪ್ರತಿಭಟನೆ ವೇಳೆ ಅತಿಯಾದ ಬಲಪ್ರಯೋಗ ನಡೆದಿದೆ ಎನ್ನುವ ಆರೋಪಗಳನ್ನು ಸರಕಾರ ತಳ್ಳಿಹಾಕಿದೆ. ಆದರೆ ಸಮರ್ಥನೀಯವಲ್ಲದ ರೀತಿಯಲ್ಲಿ ಬಲಪ್ರಯೋಗ ನಡೆದಿರುವುದು ಮತ್ತು ಪೆಲೆಟ್ ಗನ್‌ಗಳು ಬಳಕೆಯಾಗಿರುವುದು ಮೇಲ್ನೋಟಕ್ಕೇ ಎದ್ದುಕಾಣಿಸುವಂತಿದೆ. ಪೆಲೆಟ್ ಗನ್‌ಗಳ ಬಳಕೆಯನ್ನು ದಿಲ್ಲಿ ಪೊಲೀಸರು ಆರಂಭದಲ್ಲಿ ನಿರಾಕರಿಸಿದ್ದರು. ಆದರೆ ಪೆಲೆಟ್ ಗನ್‌ಗಳ ಬಳಕೆ ಬಗ್ಗೆ ಪೊಲೀಸ್ ಡೈರಿಯಲ್ಲಿ ಉಲ್ಲೇಖವಿರುವುದು ಬೆಳಕಿಗೆ ಬಂದಿದೆ. ಪ್ರತಿಭಟನೆಯಲ್ಲಿ ತೊಡಗಿದ್ದ ವಿದ್ಯಾರ್ಥಿಗಳ ಮೇಲೆ ನಡೆದ ಅತಿಯಾದ ಬಲಪ್ರಯೋಗದ ಹೊಣೆಗಾರಿಕೆಯನ್ನು ಗೊತ್ತುಪಡಿಸುವುದಕ್ಕೂ ತನಿಖೆ ನೆರವಾಗಬಹುದು. ಶಾಂತಿಯುತ ಪ್ರತಿಭಟನೆಯು ಪ್ರಜೆಯ ಸಾಂವಿಧಾನಿಕ ಹಕ್ಕು. ಆ ಹಕ್ಕಿಗೆ ಕುಂದು ತರುವ ಎಂತಹುದೇ ಪ್ರಯತ್ನವನ್ನು ಪ್ರಜ್ಞಾವಂತ ಸಮಾಜ ಖಂಡಿಸಬೇಕು ಮತ್ತು ದನಿ ಎತ್ತುವ ದಿಟ್ಟತನವನ್ನು ತೋರಬೇಕು. ಪ್ರಜಾಪ್ರಭುತ್ವದ ಬೇರುಗಳನ್ನು ಗಟ್ಟಿಗೊಳಿಸುವ ಇಂತಹ ಪ್ರಯತ್ನಗಳಿಗೆ ಪಕ್ಷಭೇದ ಇರಬಾರದು.

ಬಯಲಾಟದ ಉಳಿವಿಗೆ ಬೇಕಿದೆ ಹೊಸ ದಾರಿ: ಯುವಪೀಳಿಗೆ ಕೈ ಹಿಡಿದಾಗಲೇ ಜನಪದ ರಂಗಕಲೆಗೆ ಭವಿಷ್ಯ

ಕಲೆಯನ್ನು ಉಳಿಸುವ ಮೊದಲ ಹೆಜ್ಜೆ ಕಲಾವಿದನನ್ನು ಉಳಿಸುವುದು; ಪರಂಪರೆಯನ್ನು ಉಳಿಸುವ ಮುಂದಿನ ಹೆಜ್ಜೆ ಅದನ್ನು ಯುವಪೀಳಿಗೆಗೆ ತಲುಪಿಸುವುದು. ಈ ಎರಡೂ ಕಾರ್ಯಗಳು ಸಮರ್ಥವಾಗಿ ನಡೆದಾಗ ಮಾತ್ರ ಬಯಲಾಟದ ರಂಗ ಮುಂದಿನ ತಲೆಮಾರುಗಳಲ್ಲಿಯೂ ಜೀವಂತವಾಗಿರುತ್ತದೆ.

ಕರ್ನಾಟಕದ ಜನಪದ ರಂಗಭೂಮಿಯ ಪರಂಪರೆಯನ್ನು ಅವಲೋಕಿಸಿದಾಗ ಬಯಲಾಟವು ಕೇವಲ ಒಂದು ಪ್ರದರ್ಶನ ಕಲೆಯಾಗಿ ಕಾಣಿಸುವುದಿಲ್ಲ. ಅದು ಗ್ರಾಮೀಣ ಬದುಕಿನ ಅನುಭವ, ಸ್ಥಳೀಯ ಭಾಷಾ ವೈವಿಧ್ಯತೆ ಆಚರಣೆಗಳು, ಪುರಾಣ, ಐತಿಹಾಸಿಕ ಕಥನಗಳು, ಸಂಗೀತ, ನೃತ್ಯ, ವೇಷಭೂಷಣ ಮತ್ತು ಅಭಿನಯವನ್ನು ಒಂದೇ ವೇದಿಕೆಯಲ್ಲಿ ಕಟ್ಟಿಕೊಡುವ ಸಮಗ್ರ ಜನಪದ ಅಭಿವ್ಯಕ್ತಿಯಾಗಿದೆ. ಈ ಕಾರಣದಿಂದಲೇ ಬಯಲಾಟವನ್ನು ಕರ್ನಾಟಕದ ಜನಪದ ಸ್ಮೃತಿ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಪ್ರಮುಖ ವಾಹಕವೆಂದು ಪರಿಗಣಿಸಬೇಕಾಗುತ್ತದೆ. ಹಾಗಾಗಿ ಯುವಪೀಳಿಗೆ ಕೈ ಹಿಡಿದಾಗಲೇ ಜನಪದ ರಂಗಕಲೆ ಉಳಿಯುತ್ತದೆ.

ಹಿಂದೆ ಗ್ರಾಮೀಣ ಸಮಾಜದಲ್ಲಿ ಬಯಲಾಟದ ಪ್ರದರ್ಶನವು ಒಂದು ಸಾಮೂಹಿಕ ಸಾಂಸ್ಕೃತಿಕ ಸಂದರ್ಭವಾಗಿತ್ತು. ಜಾತ್ರೆ, ಉತ್ಸವ, ಹಬ್ಬ ಹಾಗೂ ವಿಶೇಷ ಆಚರಣೆಗಳ ಸಂದರ್ಭದಲ್ಲಿ ಬಯಲಾಟ ನಡೆಯುವುದು ಸಹಜವಾಗಿತ್ತು. ಒಂದು ಪ್ರದರ್ಶನವನ್ನು ನೋಡಲು ಸುತ್ತಮುತ್ತಲಿನ ಗ್ರಾಮಗಳಿಂದಲೂ ಜನರು ಸೇರುತ್ತಿದ್ದರು. ರಾತ್ರಿ ಆರಂಭವಾಗಿ ಬೆಳಗಿನವರೆಗೂ ನಡೆಯುತ್ತಿದ್ದ ಪ್ರದರ್ಶನದಲ್ಲಿ ಕಥೆ, ಹಾಡು, ವಾದ್ಯ, ಸಂಗೀತ, ನೃತ್ಯ, ಹಾಸ್ಯ ಹಾಗೂ ಸಂಭಾಷಣೆಗಳು ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುತ್ತಿದ್ದವು. ಮನರಂಜನೆಯ ಜತೆಗೆ ಬದುಕಿನ ಮೌಲ್ಯಗಳು, ನೀತಿ, ನ್ಯಾಯ, ಸತ್ಯ, ಧರ್ಮ, ಸಹಬಾಳ್ವೆ, ಸಾಮಾಜಿಕ ಜವಾಬ್ದಾರಿಯಂತಹ ವಿಚಾರಗಳನ್ನೂ ಜನರಿಗೆ ತಲುಪಿಸುವ ಕೆಲಸವನ್ನು ಬಯಲಾಟ ಮಾಡುತ್ತಿತ್ತು. ಹೀಗಾಗಿ ಬಯಲಾಟವು ಗ್ರಾಮೀಣ ಸಮಾಜದಲ್ಲಿ ಮನರಂಜನೆಯ ಸಾಧನ ಮಾತ್ರವಲ್ಲದೆ, ಒಂದು ರೀತಿಯ ಜನಶಿಕ್ಷಣದ ಮಾಧ್ಯಮವಾಗಿಯೂ ಕಾರ್ಯನಿರ್ವಹಿಸಿತ್ತು.

ಆದರೆ ಸಾಮಾಜಿಕ ಮತ್ತು ತಾಂತ್ರಿಕ ಬದಲಾವಣೆಗಳೊಂದಿಗೆ ಬಯಲಾಟದ ಪರಿಸರವೂ ಸಾಕಷ್ಟು ಬದಲಾಗಿದೆ. ದೂರದರ್ಶನ, ಚಲನಚಿತ್ರ, ಮೊಬೈಲ್ ಫೋನ್, ಸಾಮಾಜಿಕ ಜಾಲತಾಣಗಳು ಹಾಗೂ ವಿವಿಧ ಡಿಜಿಟಲ್ ಮನರಂಜನಾ ಮಾಧ್ಯಮಗಳು ಜನರ ಮನರಂಜನೆಯ ಸ್ವರೂಪವನ್ನು ಬದಲಿಸಿವೆ. ಅದರಲ್ಲೂ ಯುವಜನರ ಸಮಯ ಮತ್ತು ಆಸಕ್ತಿಯ ಬಹುಪಾಲು ಡಿಜಿಟಲ್ ಜಗತ್ತಿನತ್ತ ಸರಿದಿದೆ. ಮತ್ತೊಂದೆಡೆ, ಶಿಕ್ಷಣ ಮತ್ತು ಉದ್ಯೋಗದ ಕಾರಣದಿಂದ ಗ್ರಾಮೀಣ ಯುವಕರು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದರಿಂದ ಗ್ರಾಮೀಣ ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಅವರ ನೇರ ಸಂಪರ್ಕವೂ ಕಡಿಮೆಯಾಗುತ್ತಿದೆ. ಇದರ ಪರಿಣಾಮವಾಗಿ ಬಯಲಾಟಕ್ಕೆ ಹೊಸ ಪ್ರೇಕ್ಷಕರು ಮತ್ತು ಹೊಸ ಕಲಾವಿದರು ದೊರೆಯುವುದು ಹಲವು ಕಡೆ ಸವಾಲಾಗಿ ಪರಿಣಮಿಸಿದೆ.

ಬಯಲಾಟದ ಇಂದಿನ ಸ್ಥಿತಿಯನ್ನು ಕೇವಲ ಪ್ರೇಕ್ಷಕರ ಕೊರತೆಯ ದೃಷ್ಟಿಯಿಂದ ನೋಡುವುದು ಸಮರ್ಪಕವಲ್ಲ. ಇದರ ಹಿಂದೆ ಕಲಾವಿದರ ಬದುಕಿನ ಪ್ರಶ್ನೆಯೂ ಅಡಗಿದೆ. ಕಲೆಯ ಮೇಲಿನ ನಿಷ್ಠೆ ಮತ್ತು ಅಭಿಮಾನದಿಂದ ಬಯಲಾಟವನ್ನು ಮುಂದುವರಿಸಿಕೊಂಡು ಬಂದ ಅನೇಕ ಕಲಾವಿದರು ತಮ್ಮ ಜೀವನೋಪಾಯಕ್ಕಾಗಿ ಕೃಷಿ, ಕೂಲಿ ಅಥವಾ ಇತರ ವೃತ್ತಿಗಳನ್ನು ಅವಲಂಬಿಸಬೇಕಾಗಿದೆ. ಒಂದು ಬಯಲಾಟದ ಪ್ರದರ್ಶನದ ಹಿಂದೆ ಹಲವು ದಿನಗಳ ತಾಲೀಮು, ಸಂಭಾಷಣೆಗಳ ಅಭ್ಯಾಸ, ಸಂಗೀತಾಭ್ಯಾಸ, ಪ್ರಯಾಣ, ವೇಷಭೂಷಣದ ಸಿದ್ದತೆ ಮತ್ತು ತಂಡದ ಸಮನ್ವಯ ಇರುತ್ತದೆ. ಈ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದ ಸಂದರ್ಭದಲ್ಲಿ ಕಲಾವಿದನ ಮುಂದೆ ಕಲೆಯ ಉಳಿವಿಗಿಂತ ಜೀವನೋಪಾಯದ ಪ್ರಶ್ನೆಯೇ ದೊಡ್ಡದಾಗುತ್ತದೆ.

ಇಲ್ಲಿ ಹಿರಿಯ ಬಯಲಾಟ ಕಲಾವಿದರ ಪಾತ್ರವನ್ನು ವಿಶೇಷವಾಗಿ ಗುರುತಿಸಬೇಕಾಗಿದೆ. ಅವರು ಕೇವಲ ನಟರು ಅಥವಾ ಗಾಯಕರಲ್ಲ; ಹಲವು ತಲೆಮಾರುಗಳಿಂದ ಬಂದಿರುವ ಅನುಭವ ಮತ್ತು ಮೌಖಿಕ ಪರಂಪರೆಯ ಜೀವಂತ ಭಂಡಾರವಾಗಿದ್ದಾರೆ. ಪಾತ್ರ ನಿರ್ವಹಣೆಯ ಶೈಲಿ, ಸಂಭಾಷಣೆಯ ಧಾಟಿ, ಹಾಡಿನ ಸಂದರ್ಭ, ರಾಗದ ಬಳಕೆ, ವೇಷಭೂಷಣ, ವೇದಿಕೆಯ ಚಲನೆ, ಪ್ರಸಂಗದ ನಿರ್ವಹಣೆ ಮುಂತಾದ ಅನೇಕ ಅಂಶಗಳು ಅವರ ಅನುಭವದಲ್ಲಿ ಉಳಿದುಕೊಂಡಿವೆ. ಇಂತಹ ಜ್ಞಾನವನ್ನು ಕೇವಲ ಪುಸ್ತಕಗಳಲ್ಲಿ ದಾಖಲಿಸುವುದರಿಂದ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಕಲಾವಿದರ ನೇರ ಅನುಭವದ ಮೂಲಕ ಯುವಪೀಳಿಗೆಗೆ ಅದು ವರ್ಗಾವಣೆಯಾಗಬೇಕು.

ಈ ಹಿನ್ನೆಲೆಯಲ್ಲಿ ಬಯಲಾಟದ ಮೌಖಿಕ ಮತ್ತು ಲಿಖಿತ ಪರಂಪರೆಯ ದಾಖಲಾತಿ ಅತ್ಯಂತ ಅಗತ್ಯ. ಕಲಾವಿದರ ಬಳಿ ಇರುವ ಹಳೆಯ ಪ್ರಸಂಗಗಳು, ಹಸ್ತಪ್ರತಿಗಳು, ಹಾಡುಗಳು, ಸಂಭಾಷಣೆಗಳು ಮತ್ತು ಪ್ರದರ್ಶನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿ ಸಂರಕ್ಷಿಸುವ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಇವುಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸುವುದರಿಂದ ಮುಂದಿನ ಸಂಶೋಧಕರಿಗೂ ಕಲಾವಿದರಿಗೂ ಉಪಯುಕ್ತವಾಗುವ ಶಾಶ್ವತ ಸಂಪನ್ಮೂಲವನ್ನು ನಿರ್ಮಿಸಬಹುದು. ಇದೇ ರೀತಿಯಲ್ಲಿ ಹಿರಿಯ ಕಲಾವಿದರ ಸಂದರ್ಶನ, ಅವರ ಜೀವನಾನುಭವ, ಪ್ರದರ್ಶನದ ನೆನಪುಗಳು ಹಾಗೂ ಕಲಿಕೆಯ ವಿಧಾನಗಳನ್ನು ಧ್ವನಿ-ದೃಶ್ಯ ರೂಪದಲ್ಲಿ ದಾಖಲಿಸುವ ಕೆಲಸವೂ ನಡೆಯಬೇಕಾಗಿದೆ.

ಆದರೆ ದಾಖಲೀಕರಣವೊಂದೇ ಬಯಲಾಟವನ್ನು ಉಳಿಸುವುದಿಲ್ಲ. ಕಲೆಯನ್ನು ಉಳಿಸಬೇಕಾದರೆ ಕಲಾವಿದನ ಬದುಕನ್ನೂ ಉಳಿಸಬೇಕು. ಹಿರಿಯ ಕಲಾವಿದರಿಗೆ ಸಮರ್ಪಕ ಗೌರವಧನ, ಮಾಸಾಶನ, ಆರೋಗ್ಯ ನೆರವು ಮತ್ತು ಸಾಮಾಜಿಕ ಭದ್ರತೆ ದೊರೆಯಬೇಕು. ಸಕ್ರಿಯ ಕಲಾವಿದರಿಗೆ ನಿರಂತರ



ಪ್ರದರ್ಶನದ ಅವಕಾಶಗಳು ಸಿಗಬೇಕು. ಮಹಿಳಾ ಕಲಾವಿದರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಿ ಅವರಿಗೆ ಸಮಾನ ಗೌರವ ಮತ್ತು ಅವಕಾಶ ಕಲ್ಪಿಸಬೇಕು. ಕಲಾವಿದನ ಪರಿಶ್ರಮಕ್ಕೆ ಮೌಲ್ಯ ದೊರೆತಾಗ ಮಾತ್ರ ಮುಂದಿನ ತಲೆಮಾರು ಈ ವೃತ್ತಿಯನ್ನು ಗಂಭೀರವಾಗಿ ಪರಿಗಣಿಸುವ ಸಾಧ್ಯತೆ ಹೆಚ್ಚುತ್ತದೆ.

ಬಯಲಾಟದ ಭವಿಷ್ಯದ ಕುರಿತು ಚರ್ಚಿಸುವಾಗ ಯುವಪೀಳಿಗೆಯನ್ನು ಕೇಂದ್ರದಲ್ಲಿ ಇರಿಸಬೇಕಾದದ್ದು ಅನಿವಾರ್ಯ. ಯುವಕರು ಜನಪದ ಕಲೆಯಿಂದ ದೂರವಾಗಿದ್ದಾರೆ ಎಂದು ಆರೋಪಿಸುವುದಕ್ಕಿಂತ, ಅವರನ್ನು ಈ ಕಲೆಯತ್ತ ಸೆಳೆಯುವಂತಹ ಹೊಸ ವಾತಾವರಣವನ್ನು ನಾವು ಸೃಷ್ಟಿಸಿದ್ದೇವೆಯೇ ಎಂಬ ಪ್ರಶ್ನೆಯನ್ನು ಮೊದಲು ಕೇಳಿಕೊಳ್ಳಬೇಕು. ಬಯಲಾಟವನ್ನು ಕೇವಲ ಹಳೆಯ ಕಾಲದ ಪೌರಾಣಿಕ ಕಥೆಗಳ ಪ್ರದರ್ಶನವೆಂದು ಪರಿಚಯಿಸಿದರೆ ಯುವಜನರಲ್ಲಿ ಸಹಜವಾಗಿ ಆಸಕ್ತಿ ಕಡಿಮೆಯಾಗಬಹುದು. ಆದರೆ ಅದರೊಳಗಿನ ಅಭಿನಯ, ಸಂಗೀತ, ನೃತ್ಯ, ಸಾಹಿತ್ಯ, ಸೃಜನಶೀಲತೆ ಮತ್ತು ಸಾಮಾಜಿಕ ಚಿಂತನೆಗಳನ್ನು ಪರಿಚಯಿಸಿದರೆ ಅದನ್ನು ಹೊಸ ದೃಷ್ಟಿಯಿಂದ ನೋಡುವ ಅವಕಾಶ ಸೃಷ್ಟಿಯಾಗುತ್ತದೆ.

ಈ ನಿಟ್ಟಿನಲ್ಲಿ ಶಾಲೆ ಮತ್ತು ಕಾಲೇಜುಗಳು ಪ್ರಮುಖ ಪಾತ್ರ ವಹಿಸಬಹುದು. ಶಿಕ್ಷಣ ಸಂಸ್ಥೆಗಳಲ್ಲಿ ಬಯಲಾಟದ ಪ್ರದರ್ಶನಗಳನ್ನು ಆಯೋಜಿಸುವುದರ ಜೊತೆಗೆ, ಹಿರಿಯ ಕಲಾವಿದರಿಂದ ಪ್ರಾಯೋಗಿಕ ತರಬೇತಿ, ಕಮ್ಮಟ, ವಿಚಾರ ಸಂಕಿರಣ ಮತ್ತು ಸಂವಾದಗಳನ್ನು ನಡೆಸಬೇಕು. ವಿದ್ಯಾರ್ಥಿಗಳು ಕಲಾವಿದರನ್ನು ಕೇವಲ ವೇದಿಕೆಯ ಮೇಲಿನ ವ್ಯಕ್ತಿಗಳಾಗಿ ನೋಡುವ ಬದಲು ಅವರೊಂದಿಗೆ ನೇರವಾಗಿ ಸಂವಾದ ನಡೆಸುವ ಅವಕಾಶ ಪಡೆಯಬೇಕು. ಇದರಿಂದ ಬಯಲಾಟವು ಪಠ್ಯಪುಸ್ತಕದ ಒಂದು ವಿಷಯವಾಗದೆ, ವಿದ್ಯಾರ್ಥಿಗಳ ಸಾಂಸ್ಕೃತಿಕ ಅನುಭವದ ಭಾಗವಾಗುತ್ತದೆ.

ಇಂದಿನ ತಂತ್ರಜ್ಞಾನವನ್ನು ಬಯಲಾಟದ ಪರಂಪರೆಯ ವಿರುದ್ಧದ ಸಾಧನವೆಂದು ನೋಡುವ ಬದಲು ಅದರ ಪ್ರಸಾರಕ್ಕೆ ಬಳಸಿಕೊಳ್ಳಬೇಕಾಗಿದೆ. ಉತ್ತಮ ಗುಣಮಟ್ಟದ ಪ್ರದರ್ಶನಗಳ ವಿಡಿಯೋ ದಾಖಲೆ, ಕಲಾವಿದರ ಸಂದರ್ಶನಗಳು, ಅಪರೂಪದ ಹಾಡುಗಳು, ಪ್ರಸಂಗಗಳು, ವಾದ್ಯಗಳು ಮತ್ತು ವೇಷಭೂಷಣಗಳ ದೃಶ್ಯ ದಾಖಲೆಗಳನ್ನು ಒಳಗೊಂಡ ಡಿಜಿಟಲ್ ಆರ್ಕೈವ್ ನಿರ್ಮಿಸಬಹುದು. ಸಾಮಾಜಿಕ ಜಾಲತಾಣಗಳು ಮತ್ತು ಡಿಜಿಟಲ್ ವೇದಿಕೆಗಳ ಮೂಲಕ ಬಯಲಾಟದ ಚಿಕ್ಕ ತುಣುಕುಗಳು, ಕಲಾವಿದರ ಪರಿಚಯ, ಹಾಡುಗಳು ಮತ್ತು ಪ್ರದರ್ಶನದ ಮಾಹಿತಿ ಯುವಜನರಿಗೆ ತಲುಪಬಹುದು. ಗ್ರಾಮೀಣ ಪ್ರದೇಶದ ಒಂದು ಸಣ್ಣ ತಂಡದ ಪ್ರದರ್ಶನವೂ ಇಂತಹ ಮಾಧ್ಯಮಗಳ ಮೂಲಕ ವಿಶಾಲ ಪ್ರೇಕ್ಷಕರನ್ನು ತಲುಪುವ ಸಾಧ್ಯತೆ ಇದೆ.

ಆದರೆ ಆಧುನಿಕತೆಯ ಹೆಸರಿನಲ್ಲಿ ಬಯಲಾಟದ ಮೂಲ ಸ್ವರೂಪವನ್ನು ಬದಲಿಸುವುದು ಸೂಕ್ತವಲ್ಲ. ಅದರ ಸ್ಥಳೀಯ ಭಾಷೆ, ಸಂಗೀತದ ವೈಶಿಷ್ಟ್ಯ, ವೇಷಭೂಷಣ, ಅಭಿನಯ ಪರಂಪರೆ ಮತ್ತು ಕಥನಶೈಲಿಯನ್ನು ಉಳಿಸಿಕೊಂಡೇ ಹೊಸ ತಂತ್ರಜ್ಞಾನವನ್ನು ಬಳಸಬೇಕು. ಪರಂಪರೆಯ ಸಂರಕ್ಷಣೆ ಮತ್ತು ಸೃಜನಾತ್ಮಕ ಬದಲಾವಣೆಗಳ ನಡುವೆ ಸಮತೋಲನ ಸಾಧಿಸುವುದು ಬಯಲಾಟದ ಮುಂದಿನ ಬೆಳವಣಿಗೆಯಲ್ಲಿ ನಿರ್ಣಾಯಕವಾಗಲಿದೆ.

ಇನ್ನೊಂದು ಮಹತ್ವದ ಸಾಧ್ಯತೆ ಸಮಕಾಲೀನ ಸಾಮಾಜಿಕ ವಿಷಯಗಳನ್ನು ಬಯಲಾಟದ ಕಥನಕ್ಕೆ ಜೋಡಿಸುವುದಾಗಿದೆ. ಪರಿಸರ ಸಂರಕ್ಷಣೆ, ನೀರಿನ ಸಮಸ್ಯೆ, ಶಿಕ್ಷಣ, ಸಾಮಾಜಿಕ ಸಮಾನತೆ, ಮಹಿಳಾ ಗೌರವ, ಮೂಢನಂಬಿಕೆ ನಿವಾರಣೆ, ಗ್ರಾಮೀಣ ಅಭಿವೃದ್ಧಿ ಮತ್ತು ಸಾಮಾಜಿಕ ಸಾಮರಸ್ಯದಂತಹ ವಿಷಯಗಳನ್ನು ಜನಪದ ಕಥನದ ಶೈಲಿಯಲ್ಲಿ ಪ್ರಸ್ತುತಪಡಿಸಬಹುದು. ಆಗ ಬಯಲಾಟವು ಕೇವಲ ಹಿಂದಿನ ಕಥೆಗಳನ್ನು ಪುನರಾವರ್ತಿಸುವ ಕಲೆಯಾಗದೆ, ವರ್ತಮಾನದ ಸಮಾಜದೊಂದಿಗೆ ಸಂವಾದ ನಡೆಸುವ ಜೀವಂತ ಮಾಧ್ಯಮವಾಗಿ ರೂಪುಗೊಳ್ಳುತ್ತದೆ.

ಇದರ ಜೊತೆಗೆ ಸರ್ಕಾರದ ಸಾಂಸ್ಕೃತಿಕ ನೀತಿಗಳಲ್ಲಿಯೂ ಬಯಲಾಟಕ್ಕೆ ನಿರಂತರ ಬೆಂಬಲ ದೊರೆಯಬೇಕು. ಬಯಲಾಟ ತಂಡಗಳಿಗೆ ಆರ್ಥಿಕ ನೆರವು, ಕಲಾವಿದರಿಗೆ ಸಮರ್ಪಕ ಸಂಭಾವನೆ, ಹಿರಿಯ ಕಲಾವಿದರಿಗೆ ಸಾಮಾಜಿಕ ಭದ್ರತೆ, ಯುವ ಕಲಾವಿದರಿಗೆ ತರಬೇತಿ, ವಾದ್ಯೋಪಕರಣ ಮತ್ತು ವೇಷಭೂಷಣಗಳಿಗೆ ನೆರವು ಹಾಗೂ ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ನಿಯಮಿತ ಪ್ರದರ್ಶನಗಳಿಗೆ ಅವಕಾಶ ಕಲ್ಪಿಸಬೇಕು. ಬಯಲಾಟ ಉತ್ಸವಗಳನ್ನು ನಿರ್ದಿಷ್ಟ ಅವಧಿಯಲ್ಲಿ ನಡೆಸುವುದರ ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿಯೂ ಪ್ರದರ್ಶನಗಳಿಗೆ ಆದ್ಯತೆ ನೀಡಬೇಕು.

ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಸಮುದಾಯಗಳ ಪಾತ್ರವೂ ಇಲ್ಲಿ ನಿರ್ಲಕ್ಷಿಸಲಾಗದು. ಗ್ರಾಮೋತ್ಸವ, ಜಾತ್ರೆ ಹಾಗೂ ಸ್ಥಳೀಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಯಲಾಟ ತಂಡಗಳಿಗೆ ಅವಕಾಶ ನೀಡುವುದು, ಕಲಾವಿದರಿಗೆ ಗೌರವಧನ ನೀಡುವುದು, ಯುವಕರನ್ನು ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು ಸರಳವಾದರೂ ಪರಿಣಾಮಕಾರಿ ಕ್ರಮಗಳಾಗಬಹುದು. ಜನರು ಬಯಲಾಟವನ್ನು ನೋಡುವುದರ ಜತೆಗೆ ತಮ್ಮ ಮಕ್ಕಳನ್ನೂ ಪ್ರದರ್ಶನಕ್ಕೆ ಕರೆದುಕೊಂಡು ಹೋಗುವ ಮನೋಭಾವ ಬೆಳೆಸಿಕೊಳ್ಳಬೇಕು. ಪ್ರೇಕ್ಷಕರೇ ಇಲ್ಲದ ವೇದಿಕೆಯಲ್ಲಿ ಯಾವುದೇ ಕಲೆಯೂ ದೀರ್ಘಕಾಲ ಜೀವಂತವಾಗಿರಲು ಸಾಧ್ಯವಿಲ್ಲ.

ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳ ಜವಾಬ್ದಾರಿಯೂ ಇದೇ ಸಂದರ್ಭದಲ್ಲಿ ಹೆಚ್ಚುತ್ತದೆ. ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಬಯಲಾಟದ ಪ್ರಕಾರಗಳು, ಪ್ರದರ್ಶನ ಪರಂಪರೆಗಳು, ಕಲಾವಿದರ ಜೀವನಚರಿತ್ರೆಗಳು, ಹಾಡುಗಳು, ಪ್ರಸಂಗಗಳು, ಹಸ್ತಪ್ರತಿಗಳು, ವಾದ್ಯಗಳು ಹಾಗೂ ವೇಷಭೂಷಣಗಳನ್ನು ವೈಜ್ಞಾನಿಕವಾಗಿ ದಾಖಲಿಸುವ ಅಗತ್ಯವಿದೆ. ಪ್ರಾದೇಶಿಕ ಭಿನ್ನತೆಗಳನ್ನು ಗುರುತಿಸಿ ಅಧ್ಯಯನ ಮಾಡುವುದರಿಂದ ಬಯಲಾಟದ ವೈವಿಧ್ಯವನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇಂತಹ ಸಂಶೋಧನಾ ಕಾರ್ಯಗಳು ಕೇವಲ ಶೈಕ್ಷಣಿಕ ಪ್ರಯೋಜನ ನೀಡುವುದಲ್ಲದೆ, ಮುಂದಿನ ಪೀಳಿಗೆಗೆ ನಂಬಿಕಸ್ಥ ಸಾಂಸ್ಕೃತಿಕ ದಾಖಲೆಗಳನ್ನೂ ಒದಗಿಸುತ್ತವೆ.

ಹೀಗಾಗಿ ಬಯಲಾಟದ ಇಂದಿನ ಸ್ಥಿತಿಯನ್ನು ಅಳಿವಿನ ಅಂಚಿನಲ್ಲಿರುವ ಕಲೆ ಎಂದು ಮಾತ್ರ ವ್ಯಾಖ್ಯಾನಿಸುವುದು ಅದರ ಜೀವಂತ ಸಾಧ್ಯತೆಗಳನ್ನು ನಿರಾಕರಿಸಿದಂತಾಗುತ್ತದೆ. ಬದಲಾಗಿ, ಅದು ಬದಲಾಗುತ್ತಿರುವ ಸಾಮಾಜಿಕ ಪರಿಸರದಲ್ಲಿ ತನ್ನ ಅಸ್ತಿತ್ವಕ್ಕೆ ಹೊಸ ಮಾರ್ಗಗಳನ್ನು ಹುಡುಕುತ್ತಿರುವ ಜನಪದ ರಂಗಕಲೆ ಎಂದು ನೋಡುವುದು ಹೆಚ್ಚು ಸೂಕ್ತ. ಅದರ ಮುಂದಿರುವ ಸವಾಲುಗಳು ನಿಜವಾದವು; ಆದರೆ ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಸಾಧ್ಯತೆಗಳೂ ಅಷ್ಟೇ ವಾಸ್ತವವಾಗಿವೆ.

ಅಂತಿಮವಾಗಿ, ಬಯಲಾಟದ ಸಂರಕ್ಷಣೆಯ ಪ್ರಶ್ನೆಯನ್ನು ಕೇವಲ ಒಂದು ಕಲಾ ಪ್ರಕಾರದ ಸಂರಕ್ಷಣೆಯಾಗಿ ನೋಡಬಾರದು. ಇದು ಒಂದು ಸಮುದಾಯದ ಸ್ಮೃತಿ, ಒಂದು ಪ್ರದೇಶದ ಭಾಷಾ ವೈಶಿಷ್ಟ್ಯ, ಜನರ ಬದುಕಿನ ಅನುಭವ ಮತ್ತು ತಲೆಮಾರುಗಳಿಂದ ಬಂದಿರುವ ಸಾಂಸ್ಕೃತಿಕ ಜ್ಞಾನವನ್ನು ಉಳಿಸುವ ಪ್ರಶ್ನೆಯಾಗಿದೆ. ಆದ್ದರಿಂದ ಮೊದಲು ಕಲಾವಿದನ ಬದುಕಿಗೆ ಭದ್ರತೆ ನೀಡಬೇಕು; ಹಿರಿಯ ಕಲಾವಿದರ ಜ್ಞಾನವನ್ನು ದಾಖಲಿಸಿ ಯುವಕರಿಗೆ ವರ್ಗಾಯಿಸಬೇಕು; ಶಿಕ್ಷಣ ಸಂಸ್ಥೆಗಳೊಂದಿಗೆ ಬಯಲಾಟವನ್ನು ಸಂಪರ್ಕಿಸಬೇಕು; ಡಿಜಿಟಲ್ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಬೇಕು; ಸಮಕಾಲೀನ ವಿಷಯಗಳೊಂದಿಗೆ ಹೊಸ ಪ್ರಯೋಗಗಳನ್ನು ನಡೆಸಬೇಕು. ಈ ಎಲ್ಲ ಪ್ರಯತ್ನಗಳು ಒಟ್ಟಾಗಿ ನಡೆದಾಗ ಮಾತ್ರ, ಬಯಲಾಟ ತನ್ನ ಮೂಲ ಸ್ವರೂಪವನ್ನು ಕಾಪಾಡಿಕೊಂಡು ಹೊಸ ಕಾಲದಲ್ಲಿಯೂ ತನ್ನ ಪ್ರಸ್ತುತತೆಯನ್ನು ಉಳಿಸಿಕೊಳ್ಳಬಲ್ಲದು.

ಬಯಲಾಟದ ಭವಿಷ್ಯವನ್ನು ನಿರ್ಧರಿಸುವ ಜವಾಬ್ದಾರಿ ಸರ್ಕಾರದೊಂದಿಗೇ ಸೀಮಿತವಾಗಿಲ್ಲ. ಕಲಾವಿದರು, ಪ್ರೇಕ್ಷಕರು, ಶಿಕ್ಷಣ ಸಂಸ್ಥೆಗಳು, ಸಂಶೋಧಕರು, ಸ್ಥಳೀಯ ಸಂಸ್ಥೆಗಳು ಮತ್ತು ಮುಖ್ಯವಾಗಿ ಯುವಪೀಳಿಗೆ ಎಲ್ಲರೂ ಈ ಪರಂಪರೆಯ ಪಾಲುದಾರರು. ಹಿರಿಯರ ಅನುಭವ ಯುವಕರ ಕೈಗೆ ವರ್ಗವಾದಾಗ, ಯುವಕರ ಸೃಜನಶೀಲತೆ ಪರಂಪರೆಯೊಂದಿಗೆ ಬೆಸೆದುಕೊಂಡಾಗ ಮತ್ತು ಸಮಾಜವು ಕಲಾವಿದನ ಪರಿಶ್ರಮಕ್ಕೆ ಗೌರವ ನೀಡಿದಾಗ ಬಯಲಾಟಕ್ಕೆ ಹೊಸ ಜೀವ ದೊರೆಯುತ್ತದೆ.

ಬಯಲಾಟದ ಬಯಲು ರಂಗವು ಕೇವಲ ಭೂತಕಾಲದ ನೆನಪಾಗಿ ಉಳಿಯದೆ, ವರ್ತಮಾನದೊಂದಿಗೆ ಸಂವಾದ ನಡೆಸುವ ಮತ್ತು ಭವಿಷ್ಯದ ಪೀಳಿಗೆಯನ್ನು ರೂಪಿಸುವ ಸಾಂಸ್ಕೃತಿಕ ವೇದಿಕೆಯಾಗಬೇಕು. ಅದಕ್ಕಾಗಿ ಈಗಲೇ ಹೊಸ ದಾರಿಗಳನ್ನು ಹುಡುಕಬೇಕಿದೆ. ಕಲೆಯನ್ನು ಉಳಿಸುವ ಮೊದಲ ಹೆಜ್ಜೆ ಕಲಾವಿದನನ್ನು ಉಳಿಸುವುದು; ಪರಂಪರೆಯನ್ನು ಉಳಿಸುವ ಮುಂದಿನ ಹೆಜ್ಜೆ ಅದನ್ನು ಯುವಪೀಳಿಗೆಗೆ ತಲುಪಿಸುವುದು. ಈ ಎರಡೂ ಕಾರ್ಯಗಳು ಸಮರ್ಥವಾಗಿ ನಡೆದಾಗ ಮಾತ್ರ ಬಯಲಾಟದ ರಂಗ ಮುಂದಿನ ತಲೆಮಾರುಗಳಲ್ಲಿಯೂ ಜೀವಂತವಾಗಿರುತ್ತದೆ.

ವಿಜಯನಗರ ಗಂಡನಷ್ಟೇ ಹೆಂಡತಿಗೂ ಗೌರವ, ಘನತೆ ಇದೆ: ಬಲವಂತದ ಮನೆಗೆಲಸ ಸಲ್ಲದು!

ಮನೆಗೆಲಸವು ಮಹಿಳೆಯೊಬ್ಬಳ ಹೊಣೆಗಾರಿಕೆ ಮಾತ್ರವಲ್ಲ; ಕುಟುಂಬದ ಎಲ್ಲ ಜವಾಬ್ದಾರಿಗಳಂತೆಯೇ ಅದನ್ನೂ ಗಂಡಹೆಂಡತಿ ಸಮಾನವಾಗಿ ಹಂಚಿಕೊಳ್ಳಬೇಕು ಎಂಬ ಹೈಕೋರ್ಟ್‌ನ ಅಭಿಪ್ರಾಯಕ್ಕೆ ಹೊಸಪೇಟೆಯ ಮಹಿಳೆಯರು ಬೆಂಬಲ ವ್ಯಕ್ತಪಡಿಸಿದ್ದಾರೆ. ದಾಂಪತ್ಯ ಜೀವನದಲ್ಲಿ ಸಮಾನತೆ, ಪರಸ್ಪರ ಗೌರವ ಮತ್ತು ಸಹಭಾಗಿತ್ವವೇ ನೆಮ್ಮದಿಯ ಕುಟುಂಬದ ಆಧಾರವಾಗಬೇಕು ಎಂಬ ಸಂದೇಶ ಶ್ಲಾಘನೀಯ.

ಮನೆಗೆಲಸವನ್ನು ಗಂಡ ಹೆಂಡತಿ ಇಬ್ಬರೂ ಸಮಾನವಾಗಿ ಹಂಚಿಕೊಂಡು ಮಾಡಬೇಕು. ಮನೆಗೆಲಸವನ್ನು ಹೆಂಡತಿಯೇ ಮಾಡಬೇಕೆಂದು ಗಂಡ ಬಲವಂತ ಮಾಡುವಂತಿಲ್ಲ ಎಂಬ ಹೈಕೋರ್ಟ್ ಹೇಳಿಕೆಗೆ ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲೂ ಮಹಿಳೆಯರಿಂದ ಬೆಂಬಲ ವ್ಯಕ್ತವಾಗಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಸಾವಯವ ಕೃಷಿಕರು, ''ಮನೆಗೆಲಸ ಎನ್ನುವುದು ಗಂಡ-ಹೆಂಡತಿ ಇಬ್ಬರೂ ಅರಿತುಕೊಂಡು ಮಾಡುವ ಕೆಲಸ. ಹೆಂಡತಿಯೇ ಎಲ್ಲ ಕೆಲಸ ಮಾಡಬೇಕೆಂದೇನೂ ಇಲ್ಲ. ಗಂಡನಷ್ಟೇ ಹೆಂಡತಿಗೂ ಘನತೆ, ಗೌರವ ಇರುತ್ತದೆ. ದುಡಿಮೆ ಅನ್ನೋದು ಕೇವಲ ಆಚೆಕಡೆಗೆ ಹೋಗಿ ಅಂದರೆ ಆಫೀಸು, ಕಂಪನಿಗೆ, ಹೊಲಕ್ಕೆ ಹೋಗಿ ದುಡಿಯುವುದು ಮಾತ್ರವಲ್ಲ. ಮನೆಗೆಲಸವೂ ಕೆಲಸವೇ'' ಎಂದು ಅವರು ಹೇಳಿದರು.

ಮದುವೆ ಎನ್ನುವುದು ಇಬ್ಬರು ಸಮಾನ ಮನಸ್ಕರ ಸಂಬಂಧವೇ ಹೊರತು ಅಸಮಾನತೆಯ ಸಂಬಂಧವಲ್ಲ ಎಂಬ ವಿಚಾರಕ್ಕೂ ಪ್ರತಿಕ್ರಿಯೆ ನೀಡಿರುವ ಭಾಗ್ಯಲಕ್ಷ್ಮೀಯವರು, ''ಮದುವೆ ಎನ್ನುವುದು ಪರಸ್ಪರ ಇಬ್ಬರೂ ಒಪ್ಪಿಕೊಂಡು ಸಮಾನವಾಗಿ ಬದುಕುವುದು. ಇಬ್ಬರಲ್ಲಿ ಯಾರೂ ಮೇಲಲ್ಲ ಕೀಳಲ್ಲ. ಜಾತಿ, ವಯಸ್ಸು , ಬಣ್ಣ, ದಪ್ಪ, ಸಣ್ಣ, ಎತ್ತರ ಇವುಗಳಿಂದ ಯಾರೂ ಅಸಮಾನರು ಅಂತಾ ಅನ್ನಿಸಬಾರದು. ಗಂಡ ಹೆಂಡತಿಯ ಜೀವನವನ್ನು ನಾವು ಕಂಪ್ಯಾನಿಯನ್ ಶಿಪ್ ಅಂತ ನೋಡ್ತಿವಿ. ಕಂಪ್ಯಾನಿಯನ್ ಶಿಪ್ ಎನ್ನುವುದು ಇಲ್ಲದೇ ಹೋದರೆ ಅದು ಸಂಬಂಧವೇ ಅಲ್ಲ'' ಎಂದು ಹೇಳಿದರು.

''ಅಲ್ಲದೇ, ಇಲ್ಲಿನ ವ್ಯವಸ್ಥೆಯಲ್ಲಿ ಗಂಡ ಹೆಂಡತಿ ಸಂಬಂಧದ ಮಧ್ಯೆ ಹತ್ತು ಹಲವು ಕಟ್ಟುಪಾಡುಗಳನ್ನು ತುಂಬಲಾಗಿದೆ. ಹೆಂಡತಿಯಾದವಳು ಹೀಗೆಯೇ ಬದುಕಬೇಕು. ಗಂಡನಾದವನು ಯಾವಾಗಲೂ ಅಧಿಕಾರ ನಡೆಸಬೇಕು. ಗಂಡ ಕೆಲಸ ಮಾಡಿಬಿಟ್ಟರೆ ಅವಮಾನ ಎಂದು ಭಾವಿಸುವುದು ಎಂಬ ಇತ್ಯಾದಿ ಅಸಮಾನತೆಯ ವಿಚಾರಗಳನ್ನು ಬಲವಂತವಾಗಿ ಹೇರಲಾಗಿದೆ. ಹುಟ್ಟಿನಿಂದಲೇ ಭೇದಭಾವ ಮಾಡುವ ವ್ಯವಸ್ಥೆ ಇದೆ. ಭೂಮಿ ಮೇಲೆ ಹೆಣ್ಣು, ಗಂಡು ಸಮಾನರು. ಇಲ್ಲಿ ಹೆಂಡತಿಯಾದವಳು ತನ್ನ ಜನ್ಮದಾತರನ್ನು ನೋಡಲು ಹೋಗಲು ಯಾರ ಅನುಮತಿಯೂ ಕೇಳಬೇಕಿಲ್ಲ. ಮತ್ತು ಇಬ್ಬರ ಮಧ್ಯೆ ಪರ್ಮಿಷನ್ ಎನ್ನುವ ಪ್ರಶ್ನೆಯೇ ಉದ್ಭವಿಸಲ್ಲ. ಅಧಿಕಾರದ ಪ್ರಶ್ನೆಯೂ ಬರುವುದಿಲ್ಲ'' ಎಂದು ಹೇಳಿದರು.

ಒಟ್ಟಿನಲ್ಲಿ, ಮನೆಗೆಲಸವು ಮಹಿಳೆಯೊಬ್ಬಳ ಹೊಣೆಗಾರಿಕೆ ಮಾತ್ರವಲ್ಲ; ಕುಟುಂಬದ ಎಲ್ಲ ಜವಾಬ್ದಾರಿಗಳಂತೆಯೇ ಅದನ್ನೂ ಗಂಡಹೆಂಡತಿ ಸಮಾನವಾಗಿ ಹಂಚಿಕೊಳ್ಳಬೇಕು ಎಂಬ ಹೈಕೋರ್ಟ್‌ನ ಅಭಿಪ್ರಾಯಕ್ಕೆ ಹೊಸಪೇಟೆಯ ಮಹಿಳೆಯರು ಬೆಂಬಲ ವ್ಯಕ್ತಪಡಿಸಿದ್ದಾರೆ. ದಾಂಪತ್ಯ ಜೀವನದಲ್ಲಿ ಸಮಾನತೆ, ಪರಸ್ಪರ ಗೌರವ ಮತ್ತು ಸಹಭಾಗಿತ್ವವೇ ನೆಮ್ಮದಿಯ ಕುಟುಂಬದ ಆಧಾರವಾಗಬೇಕು ಎಂಬ ಸಂದೇಶ ಶ್ಲಾಘನೀಯ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR